ಬಂತು. ಆಸ್ ಫಾರ್ ಆಸ್ ಎಸ್.ಸಿ. ಅಂಡ್ ಎಸ್.ಟಿ. ಕನ್ಸರ್ನ್ಡ್ in proportion to their population. ಮೀಸಲಾತಿ ನೀವು ಇದಿ. ಉಳಿದಂತಹವು ಬೇಕಾದರೆ ಅಲ್ಲೊಂದು ಪರ್ಸೆಂಟ್ ಇಲ್ಲೊಂದು ಪರ್ಸೆಂಟ್ ಕದಿಮೆ ಮಾಡಿ ಅಡ್ಜಸ್ಟ್ ಮಾಡಿ. ಇಲ್ಲದಿದ್ದರೆ ದೊಡ್ಡ ಅನ್ಯಾಯವಾಗುತ್ತದೆ. ಬೇರೆ ಕಡೆ ಹೇಗೆ ಇದೆ ಹಾಗೆ ಮಾಡಬೇಕು. ಇಡೀ ದೇಶದಲ್ಲಿ ಹೇಗೆ ಇದೆ ಹಾಗೆ ಮಾಡಿ. ಇನ್ ಪ್ರೊಪರೇಷನ್ ಟುದಿ ಪಾಪ್ಯುಲೇಷನ್ ಎಂದು ಏನು ಇದೆ ಅದನ್ನು ಇಟ್ಟುಕೊಳ್ಳಬೇಕು. ಉಳಿದುದ್ದನ್ನು ಯಾವ ರೀತಿಯಾಗಿ ಪಾಪ್ಯುಲೇಷನ್ ಪ್ರಕಾರ ನೀವೇನು ಇಟ್ಟುಕೊಳ್ಳುತ್ತೀರಿ ಅದನ್ನು ಇದಿ. ಒಂದು ಕಡೆ 5-10 ಕೊಟ್ಟಿರಬಹುದು. ಅದನ್ನು ಸರಿಪಡಿಸಿಕೊಳ್ಳಿ. ಆದರೆ ಇದಕ್ಕೆ ಧಕ್ಕೆ ಕೊಟ್ಟರೆ ರೆಕ್ರೂಟ್ ಮೆಂಟಿನಲ್ಲೂ ಧಕ್ಕೆಯಾಗುತ್ತದೆ, ನಾಳೆ ಎಸ್ಇಪಿ ಹಣದಲ್ಲಿ ಧಕ್ಕೆಯಾಗುತ್ತದೆ. ಯಾವುದೇ ಒಂದು ಬಾಬತ್ತಿನಲ್ಲಿ ನೀವು ಕೊಡತಕ್ಕಂತಹ ಸಹಾಯ ಸರಿಯಾದ ರೀತಿಯಲ್ಲಿ ಅವರಿಗೆ ದೊರೆಯುವುದಿಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಯೋಜನೆ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬೇರೆ ರಾಜ್ಯಗಳಲ್ಲಿ ಹೇಗೆ ಮಾಡಿದ್ದಾರೆನ್ನುವುದನ್ನು ತರಿಸಿಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿ ಇದನ್ನು ಪರಿಶೀಲನೆ ಮಾಡುವ ವ್ಯವಸ್ಥೆಯನ್ನು ನಾನು ತಮ್ಮ ಮೂಲಕ ಸದನಕ್ಕೆ ಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬಂದಿಲ್ಲ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯ ಮಂತ್ರಿಗಳು ಕುರುಬರ ಸಮಾವೇಶದಲ್ಲಿದ್ದಾರೆ, ನನಗೆ ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಹೇಳತಕ್ಕಂತಹ ವಿಚಾರಗಳನ್ನು ನಾನು ಅವರ ಪರವಾಗಿ ನೋಟ್ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಬಂದ ಮೇಲೆ ಉತ್ತರ ಕೊಡುತ್ತಾರೆ.

4.30 ಪಿ.ಎಂ.

ನಿಯಮ 69ರ ಮೇರೆಗೆ

ಕೃಷ್ಣಾ ನದಿನೀರನ್ನು 2000 ಇಸವಿಯೊಳಗೆ ಸಂಪೂರ್ಣವಾಗಿ ಬಳಸಿಕೊಳ್ಳುವ ಬಗ್ಗೆ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಪ್ರಕಾರ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ರೈತರ ಬವಣೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದಿನಾಂಕ 09-2-1996ರಲ್ಲಿ ಈ ಅಧಿವೇಶನ ಪ್ರಾರಂಭವಾದ ಮೊದಲನೇ ದಿವಸ ನಾವು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ನೋಟೀಸು ಕೊಟ್ಟಿದ್ದೇವೆ. ಇದು ಅತ್ಯಂತ ಪ್ರಮುಖವಾದ ವಿಷಯ ಇದರ ಬಗ್ಗೆ ಪ್ರಾರಂಭದ ದಿವಸ ದಲ್ಲೇ ಪ್ರಸ್ತಾಪವಾಗಬೇಕು, ಚರ್ಚೆಯಾಗಬೇಕು, ಸದನದ ಕಾರ್ಯಕಲಾಪ ಮುಗಿಯುವುದರೊಳಗಾಗಿ ಇದಕ್ಕೇನಾದರೂ ಪರಿಹಾರ ಹುಡುಕಿ ಆ ಭಾಗದ

ಜನರಿಗೆ ಅನುಕೂಲ ಮಾಡಿಕೊಡಬೇಕು. ಉತ್ತರ ಕರ್ನಾಟಕದ ಜನರಿಗೆ ಒಂದು ರೀತಿಯ ಮಲತಾಯಿ ಧೋರಣೆಯಾಗುತ್ತಿದೆ ಎಂಬ ಭಾವನೆ ಜನರಲ್ಲಿ ಏನು ಬಂದಿದೆ ಅದನ್ನು ಸರಿಪಡಿಸಬೇಕೆಂದು ನಾನು ಕಳಿಸಿಕೊಟ್ಟಿದ್ದೇನೆ ಆದರೆ ಕೊನೆ ದಿವಸ ಮನೆಗೆ ಹೋಗುವಂತಹ ಕಾಲದಲ್ಲಿಯಾದರೂ ಇದಕ್ಕೆ ಏನು ಅವಕಾಶ ಸಿಕ್ಕಿದೆ, ಅದಕ್ಕಾಗಿ ನಾನು ಧನ್ಯವಾದಗಳನ್ನು ಮಾನ್ಯ ಅಧ್ಯಕ್ಷರಿಗೆ ತಿಳಿಸುತ್ತಿದ್ದೇನೆ. ಕೃಷ್ಣ ಕಾವೇರಿ ಈ ರಾಜ್ಯದ ನಾಡಿನ ಜನರ ಎರಡು ಕಣ್ಣು ಇದ್ದಂತೆ ದೈವಿಕವಾಗಿ ದೇವರು ಕೊಟ್ಟಂತಹ ವರ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನ ನಮ್ಮಿಂದಾಗಲಿಲ್ಲ. ಯಾವ ಕೃಷ್ಣ ಮಹಾರಾಷ್ಟ್ರದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಹರಿದು ಆಂಧ್ರ ಪ್ರದೇಶದ ಮೂಲಕ ಬಂಗಾಳ ಕೊಲ್ಲಿ ಸೇರುತ್ತಿದೆ ಈ ಒಂದು ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವಂತಹ ಪ್ರಯತ್ನ ಬಚಾವತ್ ಆಯೋಗದ ತೀರ್ಮಾನದ ಪ್ರಕಾರ 2 ಸಾವಿರದ ವರ್ಷದ ಒಳಗೆ ಏನು ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅದನ್ನು ಬಹುತೇಕ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದವರು ಈಗಾಗಲೇ ಉಪಯೋಗ ಮಾಡಿಕೊಂಡಿದ್ದಾರೆ. ನಮ್ಮ ಒಂದು ದಿವ್ಯ ನಿರ್ಲಕ್ಷದಿಂದ ಇವತ್ತು 1964ರಲ್ಲಿ ಶಂಕುಸ್ಥಾಪನೆಯಾದಂಥ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು 67-68ರಲ್ಲಿ ನಾವು ಪ್ರಾರಂಭ ಮಾಡಿದೆವು. ಇದುವರೆಗೆ ಶೇಕಡ 50 ಭಾಗ ಕೂಡ ಕೆಲಸ ಪೂರ್ಣವಾಗಿಲ್ಲ. ನಾನು ಹಾಗೆ ನೋಡುತ್ತಿದ್ದೆ. ನನ್ನ ಹತ್ತಿರ ದಾಖಲೆ ಇದೆ. 1967-68 ರಿಂದ 1995-96ರವರೆಗೆ 26 ವರ್ಷಗಳಲ್ಲಿ ನಾವು ಏನು ಮಾಡಿದ್ದೇವೆ, ಎಷ್ಟು ಹಣವನ್ನು ಇದಕ್ಕೆ ವಿನಿಯೋಗ ಮಾಡಿದ್ದೇವೆ, ಏನ್ನುವ ಅಂಕಿ ಅಂಶವನ್ನು ನೋಡಿದೆ. ಇದುವರೆಗೆ ಒಟ್ಟಾರೆ ಈ 26 ವರ್ಷಗಳಲ್ಲಿ ನಾವು ಖರ್ಚು ಮಾಡಿರುವ ಹಣ ಕೇವಲ 2680 ಕೋಟಿ ರೂಪಾಯಿಗಳು ಮಾತ್ರ. ಕಳೆದ 26 ವರ್ಷಗಳಿಂದ 2680 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಆಶ್ಚರ್ಯ ತರುವ ಸಂಗತಿ ಎಂದರೆ ನೂರು ಕೋಟಿಗಿಂತ ಹೆಚ್ಚು ಖರ್ಚು ಮಾಡಿದ್ದಂಥದ್ದು 1991-92ರಿಂದ 107 ಕೋಟಿ ರೂಪಾಯಿಯನ್ನು ಇಟ್ಟಿದ್ದೆವು. 101 ಕೋಟಿ 82 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆವು. 1992-93ರಲ್ಲಿ 158 ಕೋಟಿ ರೂಪಾಯಿ ಇಟ್ಟಿದ್ದೆವು. ಅದರಲ್ಲಿ 127.57 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವು 1993-94ರಲ್ಲಿ 306 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಅದರಲ್ಲಿ 240 ಕೋಟಿ 48 ಲ ರೂಪಾಯಿಗಳನ್ನು ಖರ್ಚು ಮಾಡಿದೆವು. 1994-95ರಲ್ಲಿ 346 ಕೋಟಿ ರೂಪಾಯಿಗಳನ ಇಟ್ಟಿದ್ದೆವು. ಕೇವಲ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವು. ಈ ವಷ ಮಾರ್ಚ್ ಕೊನೆಯವರೆಗೆ ಸುಮಾರು 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇ ಎಂದು ಇಟ್ಟುಕೊಂಡರೂ ಸಹ ಈ 26 ವರ್ಷಗಳಲ್ಲಿ ನಾವು ಖರ್ಚು ಮಾಡಿರುವಂಥ 2680 ಕೋಟಿ ರೂಪಾಯಿಗಳು ಮಾತ್ರ. ನಾವು ಕಾವೇರಿ ಜಲಾನಯನ ಪ್ರದೇಶದಲ್ಲಿಯ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ. ಹೇಮಾವತಿ ಕೆಲಸ ಯಾವಾಗ ಪ್ರಾರಂಭವಾಯಿತ ಇದುವರೆಗೆ ನಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ? ಅದೇ ವೇಗ, ಅದೇ ಕಳಕ

ಅದೇ ರೀತಿ ಹಣವನ್ನು ಈ ಒಂದು ನೀರಾವರಿ ಯೋಜನೆಗೆ ಹೂಡುವಂಥ ಒಂದು ಪ್ರಾಮಾಣಿಕ ಪ್ರಯತ್ನ ಏತಕ್ಕೆ ಆಗಲಿಲ್ಲ? ಕಾವೇರಿ ಜೇಸಿನನಲ್ಲಿ ವರ್ಲ್ಡ್ ಬ್ಯಾಂಕ್ ಏಡ್ ಇಲ್ಲ. ಇಲ್ಲಿ ಅನುಕೂಲ ಇದೆ. ಇಲ್ಲಿ ವರ್ಲ್ಡ್ ಬ್ಯಾಂಕ್ ಏಡ್ ನಮಗೆ ಸಿಕ್ಕಿದೆ. ಇಷ್ಟಾದರೂ ಸಹಾ ಪಕ್ಕದ ಎರಡು ರಾಜ್ಯಗಳು ಈ ನೀರನ್ನು ಉಪಯೋಗಿ ಮಾಡಿಕೊಂಡು ಬಚಾವತ್ ಅವಾರ್ಡ್ ಆಯೋಗದ ತೀರ್ಮಾನದ ಪ್ರಕಾರ ಎರಡು ಸಾವಿರ ವರ್ಷಗಳ ನಂತರ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕೋ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆ ಕಡೆಯವರನ್ನು ಮಾತ್ರ ನಾನು ದೂರುವುದಿಲ್ಲ. ನನಗೆ ಆಶ್ಚರ್ಯವಾಗುವಂಥದ್ದು. ನಮಗೆ ಈ ಕಡೆ ಇರುವಂಥ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಬಹುತೇಕ ಆ ಒಂದು ಬರಗಾಲ ಪೀಡಿತ ಪ್ರದೇಶ, ತುಳಿತಕ್ಕೆ ಒಳಗಾಗಿರುವ ಪ್ರದೇಶ, ಯಾವ ಉತ್ತರ ಕರ್ನಾಟಕ ನಿರ್ಲಕ್ಷ್ಯವಾಗಿದೆ ಎಂದು ಆ ಜನ ಹೇಳುತ್ತಿದ್ದಾರೋ ಆ ಭಾಗದಿಂದ ಬಂದಂಥ ಅನೇಕ ಹಿರಿಯರು ಆ ಆಡಳಿತ ಪಕ್ಷದಲ್ಲಿ ಉನ್ನತ ಸ್ಥಾನದಲ್ಲಿದ್ದರು, ಕ್ಯಾಬಿನೆಟ್ ಸಚಿವರಾಗಿದ್ದರು. ನಿಜಕ್ಕೂ ಸಹ ಈ ಯೋಜನೆಯನ್ನು ಪ್ರಗತಿಯತ್ತ ತೆಗೆದುಕೊಂಡು ಹೋಗುವಂಥ ಅವಕಾಶಗಳು ಸಿಕ್ಕಿತ್ತು. ಅದು ಆಗಲಿಲ್ಲ. ಆ ಪ್ರಾಮಾಣಿಕ ಪ್ರಯತ್ನವಾಗಲಿಲ್ಲ. 1983ರಲ್ಲಿ ನಾನು ಇಲ್ಲಿ ಶಾಸಕನಾಗಿ ಇದ್ದೇನೆ. 1983 ರಿಂದ ಇವತ್ತಿನವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ಅನೇಕ ಚರ್ಚೆಗಳನ್ನು ನಾವು ಮಾಡುತ್ತೇವೆ. ಗಂಟೆಗಟ್ಟಲೆ ಚರ್ಚೆ ಮಾಡುತ್ತೇವೆ. ಅನೇಕ ಆಶ್ವಾಸನೆಗಳನ್ನು ನಾನು ಕೇಳಿದ್ದೇನೆ. ನಾವು ಅನೇಕ ಸಂಕಲ್ಪಗಳನ್ನು ತೊಟ್ಟಿದ್ದೇವೆ ಎನ್ನುವ ಮಾತನ್ನು ಕೇಳಿ ನನ್ನ ಕಿವಿ ಕುರುಡಾಗಿದೆ. ಯಾವ ವರ್ಷನೂ ಸಹ ನಾವು ಈ ದಿಕ್ಕಿನಲ್ಲಿ ತೆಗೆದಿಟ್ಟ ಹಣವನ್ನು ಬಿಡುಗಡೆ ಮಾಡುವಂಥ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ. ಮುಂದೆ ಬರುವಂಥ ಎರಡು ಸಾವಿರ ವರ್ಷದೊಳಗಾಗಿ ಯಾವ ಒಂದು ಕಳಕಳಿ, ಯಾವ ಒಂದು ಪೊಲಿಟಿಕಲ್ ವಿಲ್ ನಮ್ಮ ಕಡೆಯಿಂದ ಒಂದು ಕಮಿಟ್‌ಮೆಂಟ್ ಇರಬೇಕಾಗಿತ್ತು ಅದು ಇಲ್ಲದೆ, ಅದೆಲ್ಲದರ ದುಷ್ಪರಿಣಾಮ ಇವತ್ತು ಉತ್ತರ ಕರ್ನಾಟಕದ ಜನತೆಗೆ ಒಂದು ರೀತಿಯ ದ್ರೋಹ ಮಾಡಿದ್ದೇವೆ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಗಂಟೆಗಟ್ಟಲೆ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅದರ ಅಗತ್ಯವೂ ಇಲ್ಲ. ಇವತ್ತು ಕೊನೆಯ ದಿವಸ. ಅನೇಕ ಜನ ಇದರ ಬಗ್ಗೆ ಬೆಳಕು ಚೆಲ್ಲುವಂಥ ಅನುಭವ ಇರುವ ಹಿರಿಯರು ಇದ್ದಾರೆ. ಸಮಸ್ಯೆ ಗೊತ್ತಿದೆ. ಆದರೆ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಬೇರೆ ಎಲ್ಲಾ ಅನಗತ್ಯ ಪ್ರಚಾರಕ್ಕಾಗಿ ಕಾರ್ಯಕ್ರಮವನ್ನು ರೂಪು ಮಾಡುತ್ತಿದ್ದೇವೆ, ಆ ಕಾರ್ಯಕ್ರಮವನ್ನು ಬದಿಗೊತ್ತಿ ಈ ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪ್ರಾಮಾಣಿಕ ಪ್ರಯತ್ನವಾಗಲಿಲ್ಲ. ಈ ಭೂಮಿಯಲ್ಲಿರುವಂಥ ಜಲರಾಶಿಯನ್ನು ಬಡ ಬೋರೇಗೌಡ ಕೊಟ್ಟಂಥ ತೆರಿಗೆ ಹಣದಿಂದ ಪ್ರಾಜೆಕ್ಟ್‌ನ್ನು ಕಟ್ಟಿದಮೇಲೆ ಅದನ್ನು ಕಾಲುವೆ ತೆಗೆದು ಆ ನೀರನ್ನು ರೈತನ ಹೊಲಕ್ಕೆ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಿದ್ದರೆ ಈ ದಟ್ಟ ದಾರಿದ್ರ್ಯ ನಮ್ಮ ರಾಜ್ಯದ ಜನರನ್ನು ಕಾಡುತ್ತಿರಲಿಲ್ಲ. ಆ ದಿಕ್ಕಿನಲ್ಲಿ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವಾಗಲಿಲ್ಲ. ಸನ್ಮಾನ್ಯ

ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಸನ್ಮಾನ್ಯ ಕೃಷ್ಣಾ ಅವರು ನೀರಾವರಿ ಸಚಿವರಾಗಿದ್ದರು. ಅವರು ಡೆಪ್ಯುಟಿ ಸಿಎಂ ಆಗಿದ್ದರು. ನನಗೆ ಜ್ಞಾಪಕ ಇದೆ. ವೀರಪ್ಪಮೊಯಿಲಿಯವರು ನೀರಾವರಿಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಡಲಿಲ್ಲ, ಹಣವನ್ನು ಬಿಡುಗಡೆ ಮಾಡಲಿಲ್ಲ ಸನ್ಮಾನ್ಯ ನಾಗೇಗೌಡರೇ ತಾವು ಇದ್ದಿರಿ. ಇಲ್ಲಿಂದ ಎಕಾಎಕಿ ಸದನವನ್ನು ಬಿಟ್ಟುಹೊರಟುಹೋದರು. ಅದೇ ರೀತಿ ಸನ್ಮಾನ್ಯ ದೇವೇಗೌಡರು ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಂತ ಕಾಲದಲ್ಲಿ ಅವರೇ ಹೇಳುವ ಪ್ರಕಾರ ನೀರಾವರಿ ಯೋಜನೆಗೆ ದುಡ್ಡು ಕೊಡಲಿಲ್ಲ ಎಂದು ಹೇಳಿ ತಮ್ಮ ಸಚಿವಸ್ಥಾನಕ್ಕೆ ರಾಜೀನಾಮೆ ಕೊಟ್ಟೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಅಂದರೆ ಕೇವಲ ರಾಜೀನಾಮೆ ಕೊಡುವುದರಿಂದ ಆಡಳಿತ ಪಕ್ಷದಲ್ಲಿದ್ದುಕೊಂಡು ಮಂತ್ರಿಯಾಗಿ ಅಥವಾ ಈ ಸದನದಿಂದ ಈ ಹಣ ಬಿಡುಗಡೆಯಾಗಲಿಲ್ಲ ಎಂದು ಹೇಳಿ ಸದನದ ಹೊರಗಡೆ ಹೋಗುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ ಕೆಲಸ ಪೂರ್ಣವಾಗುವುದಿಲ್ಲ. ದು:ಖ ತರುವ ಸಂಗತಿ ಎಂದರೆ, ಈ ಭಾಗದಲ್ಲಿ ಕಾವೇರಿ ಸಮಸ್ಯೆಗಳು ಬರುತ್ತಾ ಇದೆ. ಹೇಗೆ ಎದ್ದು ನಿಲ್ಲುತ್ತಿದ್ದೇವೆ, ಹೇಗೆ ಒಂದಾಗಿ ಹೋರಾಟವನ್ನು ಮಾಡುತ್ತಿದ್ದೇವೆ. ಆದರೆ ಆ ಭಾಗ ಏಕೆ ನಿರ್ಲಕ್ಷವಾಯಿತು? ಅಂದರೆ ಅಲ್ಲಿರುವಂಥ ಜನಜಾಗೃತಿ ಇರಲಿಲ್ಲವೆಂತಲೇ? ಅಥವಾ ಅವರೇನೂ ಕಣ್ಣುಮುಚ್ಚಿಕೊಂಡು ಓಟು ಕೊಟ್ಟು ಹೇಗೋ ಶಾಸಕರನ್ನಾಗಿ ಮಾಡುತ್ತಾರೆ, ಅವನ ಹೊಲಕ್ಕೆ ನೀರನ್ನು ಕೊಟ್ಟರೆ ಎಲ್ಲಿ ಜಾಗೃತರಾಗಿ ಎಲ್ಲಿ ನಮ್ಮ ಒಂದು ಬೇಳೆಕಾಳು ಬೇಯುವುದಿಲ್ಲ ಎನ್ನುವಂಥ ರಾಜಕಾರಣವೇ? ಏನಾಯಿತೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ಕಡೆ ಇಡಬೇಕಾದಂಥ ಒಂದು ಪ್ರಾಮಾಣಿಕ ಪ್ರಯತ್ನ, ಕಳಕಳಿ ಇಲ್ಲದ ಪರಿಣಾಮ ಈ ಒಂದು ದುಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಬಚಾವತ್ ಅವಾರ್ಡ ತೀರ್ಪಿನ ಪ್ರಕಾರ ಕರ್ನಾಟಕ ತನ್ನ ಪಾಲನ್ನು 757 ಟಿಎಂಸಿ 734 ಟಿಎಂಸಿ ಕೃಷ್ಣಾದಿಂದ 23 ಟಿಎಂಸಿ ಗೋದಾವರಿಯಿಂದ ಏನು ಎರಡು ಸಾವಿರ ವರ್ಷದೊಳಗಾಗಿ ನಾವು ಉಪಯೋಗವನ್ನು ಮಾಡಿಕೊಳ್ಳಬೇಕಾಗಿದೆಯೋ ಅದನ್ನು ಮಾಡಿಕೊಳ್ಳದಿದ್ದರೆ ನಮ್ಮ ಸಂಪೂರ್ಣ ಹಕ್ಕನ್ನು ಕಳೆದುಕೊಳ್ಳುತ್ತೇವೆ. ಕೆಲವರ ಮಾತನ್ನು ನಾನು ಕೇಳಿದ್ದೇನೆ. ಎರಡು ಸಾವಿರ ಇಸವಿಯಲ್ಲಿ ಮುಗಿಸದಿದ್ದರೆ ನಮ್ಮ ಹಕ್ಕು ಎಲ್ಲಿಗೆ ಹೋಗುತ್ತದೆ.? ನಾವು ಬೇಕಾದಾಗ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಎಂದರೆ ಅದು ಆಗುವುದಿಲ್ಲ. ಯಾವಾಗ ಜಲಾಶಯವನ್ನೇ ನಾವು ಕಟ್ಟಿಕೊಂಡು ಪ್ರಾಜೆಕ್ಟ ಮುಗಿದ ಮೇಲೆ ಅಲ್ಲಿ ನೀರನ್ನು ತುಂಬಿಟ್ಟಾಕ್ಷಣ ಅದಕ್ಕೆ ನಮಗೆ ರೈಟ್ಸ ಬರುವುದಿಲ್ಲ. ಆ ನೀರನ್ನು ಕಾಲುವೆಯಲ್ಲಿ ಬಿಟ್ಟು ನಮ್ಮ ರೈತನ ಹೊಲಕ್ಕೆ ನೀರು ಕೊಟ್ಟಾಗ ಮಾತ್ರ ಆ ಕ್ಲೈಮ ಬರುತ್ತದೆ. ಹರಿದು ಹೋದಾಗ ಯಥೇಚ್ಛವಾಗಿ ಆ ನೀರನ್ನು ಉಪಯೋಗ ಮಾಡಿಕೊಂಡು ಪಕ್ಕದ ರಾಜ್ಯಗಳು ನೀರಾವರಿ ಯೋಜನೆಗೆ ಕುಡಿಯುವ ನೀರು ಮತ್ತೊಂದು ಮಗದೊಂದಕ್ಕೆ ಅಭಿವೃದ್ಧಿ ಮಾಡಿಕೊಂಡ ಮೇಲೆ ಅವರಿಗೆ ಕ್ಲೈಮ ಸಿಗುತ್ತದೆ. ಬಡಿದಾಟ ಮಾಡಬೇಕಾಗುತ್ತದೆ. ಪಕ್ಕದ ತಮಿಳುನಾಡಿನ ಜೊತೆಗೆ ಕಾವೇರಿ ನೀರಿನ ಬಗ್ಗೆ ಇವತ್ತು ಯಾವ ಸಮಸ್ಯೆಯನ್ನು ಎದುರಿಸುತ್ತಿದ್ದೇವು ಅದೇ ಸಮಸ್ಯೆಯನ್ನು, ಅದೇ ಭೀಕರ ಪರಿಸ್ಥಿತಿಯನ್ನು

ಎದುರಿಸುವಂಥ ಧಾರುಣ ಪರಿಸ್ಥಿತಿ ಈ ರಾಜ್ಯಕ್ಕೆ ಬರುವುದು ಇದೆ. ಈಗಲಾದರೂ ಸಮಯ ಮೀರಿಲ್ಲ. ಈ ದಿಕ್ಕಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ನಮ್ಮಮ್ಮ ಕಡೆಯಿಂದ ಆಗಬೇಕಾಗಿದೆ. ಸ್ವಾಮಿ, ಈ ಕೆಲಸ ಪ್ರಾರಂಭವಾಗಿ 26 ವರ್ಷಗಳಾಯಿತು. 32 ವರ್ಷಗಳ ಹಿಂದೆ ಅಂದರೆ 1964ರಲ್ಲಿ ಈ ಯೋಜನೆಗೆ ಶಂಕುಸ್ಥಾಪನೆಯಾಗಿದ್ದರೂ ಸಹಾ ಪ್ರತ್ಯಕ್ಷವಾಗಿ ಕೆಲಸವನ್ನು ಪ್ರಾರಂಭ ಮಾಡಿದ್ದು 1967-68ರಿಂದ. ಇದುವರೆಗೆ ನಾವು ಏನು ಮಾಡಿದ್ದೇವೆ, 757 ಟಿಎಂಸಿ ಯಲ್ಲಿ, ನಾವು ಉಪಯೋಗ ಮಾಡಿಕೊಂಡಿರುವುದು ಕೃಷ್ಣಾ ಕಣಿವೆ ಯೋಜನೆಯಲ್ಲಿ ಕೇವಲ 378 ಟಿಎಂಸಿ ಮಾತ್ರ. ಅಂದರೆ 28 ವರ್ಷದಲ್ಲಿ 2680 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅರ್ಧ ಉಪಯೋಗ ಮಾಡಿಕೊಂಡಿದ್ದೇವೆ. ಇನ್ನು ನಾಲ್ಕು ವರ್ಷಗಳ ಒಳಗಾಗಿ ಎರಡು ಸಾವಿರ ವರ್ಷದ ಒಳಗಾಗಿ ಸುಮಾರು ಏಳೆಂಟು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕನಿಷ್ಟ ಎಂಟು ಸಾವಿರ ಕೋಟಿ ರೂಪಾಯಿ ಬೇಕು ಎಂದು ಹೇಳುತ್ತಾರೆ. ಈ ಹಣವನ್ನು ನಾವು ಖರ್ಚು ಮಾಡಿ ಈ ಯೋಜನೆಯನ್ನು ಪೂರ್ಣ ಮಾಡುವಂಥ ಒಂದು ಜವಾಬ್ದಾರಿ ನಾವು ಯಾವುದೇ ಕಡೆ ಇರಲಿ, ನಮ್ಮ ಮೇಲೆ ನಿಮ್ಮ ಮೇಲೆ ಇದೆ ಎಂದು ನಾನಾದರೂ ಭಾವಿಸುತ್ತೇನೆ. ಆ ರೀತಿಯ ಪ್ರಾಮಾಣಿಕ ಪ್ರಯತ್ನ ಇವತ್ತು ನಾವು ನೀವೆಲ್ಲ ಸೇರಿ ಮಾಡುವಂಥ ಒಂದು ಪರಿಸ್ಥಿತಿ ಬಂದಿದೆ. ಬಹುಶ ಈಗ ನಡೆಯುತ್ತಿರುವಂಥ ಎಲ್ಲಾ ನೀರಾವರಿ ಯೋಜನೆಗಳು ಪೂರ್ತಿಯಾದರೂ ಇನ್ನು 325 ಟಿಎಂಸಿ ನೀರನ್ನು ನಾವು ಬಳಕೆ ಮಾಡಿದಂತಾಗುತ್ತದೆ. ಉಳಿದಂಥ ಸುಮಾರು 125 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೋಸ್ಕರ ಸರ್ಕಾರ ಕಡೆಯಿಂದ ಈವರೆಗೆ ಯಾವುದೇ ಒಂದು ರೂಪುರೇಷೆಗಳನ್ನಾಗಲಿ, ಬ್ಲೂಪ್ರಿಂಟ್ ಆಗಲಿ ತಯಾರು ಮಾಡುವಂಥ ಯಾವುದೇ ಒಂದು ಪ್ರಯತ್ನ ಇದುವರೆಗೆ ನಮ್ಮ ಕಡೆಯಿಂದ ಆಗಲಿಲ್ಲ. ಒಂದು ದುಃಖ ತರುವ ಸಂಗತಿ ಎಂದರೆ, ಈ ರೀತಿ ಅಧಿಕಾರ ಸ್ಥಾನಮಾನದಲ್ಲಿದ್ದಂಥವರೂ ಸಹಾ ಈಗ ಈ ಯೋಜನೆಗಳು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಹೇಳಿ ಮಾತನಾಡುವುದನ್ನು, ಹೇಳಿಕೆ ಕೊಡುವುದನ್ನು ನಾನು ಅನೇಕ ಬಾರಿ ಕೇಳಿದ್ದೇನೆ.

ಸನ್ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ನಾವೆಲ್ಲರೂ ಭಾವಿಸಿದ್ದೆವು. ನಾನು ಕಳೆದ ಒಂದು ವರ್ಷದಲ್ಲಿ ಡಾ.ತಂಗಾ ಅವರ ಜೊತೆ ಸುಮಾರು 4-5 ಬಾರಿ ಅಲ್ಲಿ ನಡೆಯುತ್ತಿರುವ ಕಾಮಗಾರಿಯ ಪ್ರಗತಿಯನ್ನು ನೋಡುವುದಕ್ಕೋಸ್ಕರ ಹೋದೆವು. ಅಧಿಕಾರಿಗಳ ಜೊತೆ ಮಾತನಾಡಿ ಬಂದಿದ್ದೇವೆ. ಸನ್ಮಾನ್ಯ ನಾಗೇಗೌಡರೆ ನಾನು ದುಃಖದಿಂದ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಳೆದ ಡಿಸೆಂಬರ್‌ನಲ್ಲಿ ತಾವು ಅಧಿಕಾರಕ್ಕೆ ಬಂದ ಮೇಲೆ ಯಾವುದೋ ಒಂದು ಕಾರಣಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಪೀಸ್ ವರ್ಕ ಕೊಡುತ್ತಿರುವುದರಿಂದ, ಅದು ಕಾವೇರಿ ಜಲಾನಯನ ಪ್ರದೇಶ ಇರಬಹುದು ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಇರಬಹುದು. ಅನೇಕ ಅವ್ಯವಹಾರಗಳು

ನಡೆಯುತ್ತಿವೆ, ಲೂಟಿ ಆಗುತ್ತಿದೆ, ಕಂಟ್ರಾಕ್ಟರ್ ಜೊತೆ ಒಳ ಒಪ್ಪಂದ ಮಾಡಿಕೊಂಡು ಹೆಚ್ಚು ಹಣ ಕೊಡುವಂತಹುದು ನಡೆಯುತ್ತಿದೆ. ಇದಕ್ಕಾಗಿ ಎಲ್ಲಾ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸಿ ತನಿಖೆ ಮಾಡಿಸುತ್ತಿದ್ದೇನೆಂದು ಹೇಳಿಕೆಯನ್ನು ಇಲ್ಲಿ ಕೊಟ್ಟರು. ಇದರ ಪರಿಣಾಮ ಹೋದ ಜನವರಿಯಿಂದ ಸೆಪ್ಟೆಂಬರ್ ಅಕ್ಟೋಬರ್ ಕೊನೆಯವರೆಗೆ ಒಂದು ಕಿಲೋ ಮೀಟರ್ ಕಾಲುವೆ ತೆಗೆಯಲಿಲ್ಲ. ತಾವು ಅಂಕಿ ಅಂಶಗಳನ್ನು ತೆಗೆದು ನೋಡಿ. ಸುಮಾರು ಎಂಟು ತಿಂಗಳುಗಳ ಕಾಲ ಗಾಢ ನಿದ್ದೆಯಲ್ಲಿ ಈ ಸರ್ಕಾರ ಮುಳುಗಿತ್ತು. ಕಳೆದ ಎರಡು ಮೂರು ತಿಂಗಳಿಂದ ನಾನು ಹೋಗಿದ್ದೇನೆ, ತ್ವರಿತ ಗತಿಯಲ್ಲಿ ಕೆಲಸ ನಡೆಯುತ್ತಿದೆ. ಆದರೆ ಆ ಕೆಲಸವನ್ನು ಅಧಿಕಾರಕ್ಕೆ ಬಂದ ತಕ್ಷಣ ಹೋದ ಬೇಸಿಗೆ ಕಾಲದಲ್ಲಿ ಯಾವ ಹಣವನ್ನು ಹಿಂದಿನ ಸರ್ಕಾರ ತೆಗೆದಿಟ್ಟಿತೋ ಆ ಹಣವನ್ನು ಪೂರ್ಣ ಖರ್ಚು ಮಾಡಲಿಲ್ಲ. ಕೆಲಸ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ, ಕಳಪೆ ನಡೆಯುತ್ತಿದೆ ಎಂದು ಹೇಳಿ ಕೆಲಸ ನಿಲ್ಲಿಸಿದಿರಿ. ಆ ವರ್ಷದ ಕೊನೆಯಲ್ಲಿ ನಾಲ್ಕು ತಿಂಗಳು ಇರಬೇಕಾದರೆ ಕೆಲಸ ಕಾರ್ಯಗಳು ಆಗಲಿಲ್ಲ. ನೀವು ಅಧಿಕಾರಕ್ಕೆ ಬಂದ ಮೇಲಾದರೂ ಅದಕ್ಕೆ ಬೇಕಾದ ಹಣವನ್ನು ತೆಗೆದಿಟ್ಟು ಖರ್ಚು ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಅನೇಕ ಕಡೆ ನೂರು ಬಾರಿ ಹೇಳಿದರು ಏನು ಕೇಳುತ್ತೀರಿ, ಹೇಗೆ ಕೊಡುತ್ತೀರಿ, ಇದು ಯಾವುದನ್ನೂ ಕೇಳಬೇಡಿ. ನಾನು ಮಾತ್ರ ನಿಶ್ಚಿತವಾಗಿ ಈ ಒಂದು ಸಾವಿರ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತೇನೆಂದು. ಆದರೆ ಇದುವರೆಗೆ ನೀವೇ ಕೊಟ್ಟಿರುವಂತಹ ಅಂಕಿ ಅಂಶಗಳ ಪ್ರಕಾರ ಅದು 370-380 ಕೋಟಿ ರೂಪಾಯಿ ದಾಟಿಲ್ಲ ಇದರಿಂದ ಈನಾಡಿನ ಜನತೆಗೆ ಕೊಟ್ಟಂತಹ ಭರವಸೆಯನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲರಾದಿರಿ. ಈಗೇನಾಯಿತು ಎಂದರೆ ಎರಡು ತಿಂಗಳಲ್ಲಿ 3-4 ತ್ವರಿತ ಗತಿಯಿಂದ ಕೆಲಸ ಆಗುತ್ತಿದೆ. ಅದೂ ಸಹ ಮುಂದಿನ ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದೆ. ಅಂದರೆ ಈ ರಾಜ್ಯದ ನೀರಾವರಿ ಯೋಜನೆಗಳು ಪ್ರಗತಿಯತ್ತ ಹೋಗಬೇಕು ಎಂದರೆ ಪ್ರತಿ ವರ್ಷ ಒಂದಲ್ಲ ಒಂದು ಚುನಾವಣೆ ಬರಬೇಕು ಆ ಚುನಾವಣೆಗಳು ಬಂದಾಗ ಹಣವನ್ನು ವಿನಿಯೋಗ ಮಾಡುವಂತಹ ಪ್ರಯತ್ನದ ಬಗ್ಗೆ ನೀವು ಯೋಜನೆ ಮಾಡುತ್ತೀರಿ. ಸುಮಾರು 800 ಕೋಟಿ ರೂಪಾಯಿಯನ್ನು ಆ ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿಗೋಸ್ಕರ ಆ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲ ಸಂಗ್ರಹಣೆ ಮಾಡುತ್ತೇವೆಂದು ಹೇಳಿದಿರಿ. ಹಿಂದಿನ ಎಲ್ಲಾ ಸರ್ಕಾರಗಳು ಇದರ ಅನುಮತಿಗೋಸ್ಕರ ಕೇಂದ್ರ ಸರ್ಕಾರದ ಜೊತೆ ಒದ್ದಾಡುವಂತಹ ಪರಿಸ್ಥಿತಿ ಬಂತು. ಅನುಮತಿ ಸಿಕ್ಕ ಮೇಲೆ ಜನ ಈ ಯೋಜನೆಯಲ್ಲಿ ಬಾಂಡ್ ಖರೀದಿ ಮಾಡಲು ಸಿದ್ಧರಿದ್ದಾರೆಂದು ಗೊತ್ತಾದ ಮೇಲೂ ಸಹ ಹಣವನ್ನು ತೊಡಗಿಸುವಂತಹ ಸಂಗ್ರಹ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನಿಮ್ಮಿಂದ ಆಗಲಿಲ್ಲ. 800 ಕೋಟಿ ರೂಪಾಯಿಗಳು ಸಂಗ್ರಹ ಮಾಡುತ್ತೇವೆಂದು ಹೇಳಿ ಇದುವರೆಗೆ ನೀವು ಸಂಗ್ರಹ ಮಾಡಿರುವುದು ಕೇವಲ 180 ಕೋಟಿ ರೂಪಾಯಿ ಮಾತ್ರ. ಆ ರೀತಿ ಸಂಗ್ರಹ ಮಾಡಿದಂತಹ 180 ಕೋಟಿ ರೂಪಾಯಿಗಳನ್ನು ಸಹ ಈ ನಿಮಿಷದವರೆಗೆ ಖರ್ಚುಮಾಡಲಿಲ್ಲ. ಎಂದರೆ ಹಿಂದೆ ಯಾವ ಒಂದು ಭರವಸೆಯನ್ನು

ಕೊಟ್ಟರೋ ಅದನ್ನು ಈಡೇರಿಸುವಂತಹ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಮಾಡದೆನೇ ಈ ನಾಡಿನ ಜನತೆಗೆ ದ್ರೋಹ ಮಾಡುವಂತಹ, ಅನ್ಯಾಯ ಮಾಡುವಂತಹ ಒಂದು ಕೆಲಸ ಆಗಿ ಹೋಯಿತು. ನಾನು ಈಗ ಹೇಳಿದಂತೆ ಈ ಯೋಜನೆ ಪೂರ್ಣ ಆಗುವುದಕ್ಕೋಸ್ಕರ ನನ್ನ ಲೆಕ್ಕದ ಪ್ರಕಾರ, ತಜ್ಞರು ಕೊಟ್ಟರುವಂಥ ಅಂಕಿ ಅಂಶದ ಪ್ರಕಾರ 7ರಿಂದ 8 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಒಂದು ಸರಿ ಸುಮಾರು ಈ ಕೆಲಸ ಪೂರ್ಣ ಆಗಬೇಕು ಎಂದರೆ ಪ್ರತಿ ವರ್ಷ ಈ ಬಜೆಟ್ ನಿಂದ, ನಾವೆಲ್ಲ ಸಹಕಾರ ಕೊಡುತ್ತೇವೆ. ನೀರಾವರಿ ಬಗ್ಗೆ ಮಾತನಾಡುತ್ತಿದ್ದೇವೆ. ನೀವು ಹೇಳಿ ಏನೆಂದರೆ ಇನ್ನು ನಾಲ್ಕು ವರ್ಷ ಅನಗತ್ಯವಾದಂತಹ ಖರ್ಚನ್ನು ಮಾಡುವುದಿಲ್ಲ. ಕಟ್ಟಡಗಳ ನಿರ್ಮಾಣವನ್ನು ನಾವು ಮಾಡುವುದಿಲ್ಲ. ಈ ಒಂದು ನೀರಾವರಿ ಯೋಜನೆಯನ್ನು ಪೂರ್ಣ ಮಾಡುವುದಕ್ಕೋಸ್ಕರ ಎಲ್ಲರ ಸಹಕಾರ ಬೇಕು ಎಂದು ಹೇಳಿದರೆ ನಾವು ಕೊಡುವುದಕ್ಕೆ ಸಿದ್ಧರಿದ್ದೇವೆ. ಅದಕ್ಕೆ ಬೇಕಾದಂತಹ ಸಹಕಾರವನ್ನು ಕೊಡಲು ನಾವು ಸಿದ್ಧರಿದ್ದೇವೆ. ಆ ರೀತಿ ಕನಿಷ್ಟ ಸಾವಿರದೈನೂರರಿಂದ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷದಿಂದ ಖರ್ಚು ಮಾಡಿದರೆ ಎರಡು ಸಾವಿರ ಇಸವಿಯೊಳಗೆ ನಮ್ಮ ಹಕ್ಕನ್ನು ಕಾಪಾಡುವುದಕ್ಕೆ ಸಾಧ್ಯ ಆಗಬಹುದು. ಈ ದಿಕ್ಕಿನಲ್ಲಿ ದಿಟ್ಟ ನಿಲುವನ್ನು ತಗದುಕೊಳ್ಳಬೇಕು. ಕನಿಷ್ಟ 1500 ಕೋಟಿ ರೂಪಾಯಿಯನ್ನು ಮುಂದಿನ ವರ್ಷ ಮಾರ್ಚ ಒಳಗೆ ಖರ್ಚು ಮಾಡುವಂತಹ ಒಂದು ದಿಟ್ಟ ನಿರ್ಧಾರವನ್ನು ಈ ಸರ್ಕಾರ ತಗದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಪರಿಸ್ಥಿತಿ ಎಷ್ಟು ಭಯಾನಕವಾಗಿದೆ. ಮುಂದೆ ನಮ್ಮ ಕಣ್ಣು ಮುಂದೆ ನಡೆಯುತ್ತಿರುವ ಎರಡು ಸಾವಿರ ಇಸವಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸುವಂತಹ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕಾಗಿದೆ. ಸುಮಾರು 63 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಜಮೀನನ್ನು ನಾವು ಆಕ್ವೈರ್ ಮಾಡಿಕೊಳ್ಳಬೇಕಾಗಿದೆ. ಸುಮಾರು 63 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಜಮೀನುಗಳನ್ನು ಖರೀದಿ ಮಾಡಬೇಕಾಗಿದೆ. ಅದಕ್ಕೆ ಎಷ್ಟು ಕೋಟಿ ರೂಪಾಯಿ ಬೇಕಾಗುತ್ತದೆ. ಅದರ ಬಗ್ಗೆ ಏನು ಚಿಂತನೆ ಆಗಿದೆ? ಇಷ್ಟು ವರ್ಷಗಳಾದರೂ ಸಹ ಈ ಯೋಜನೆಗೆ ಅಗತ್ಯವಾಗಿರುವಂತಹ ಜಮೀನನ್ನು ಆಕ್ವೈರ್ ಮಾಡಿಕೊಂಡು ಅವರಿಗೆ ಪರಿಹಾರ ಕೊಟ್ಟು ಇಟ್ಟಿಸಿದ್ದರೆ ನಾವು ಬೇಕಾದಾಗ ಚಾನಲ್ ತೆಗೆದುಕೊಂಡು ಹೋಗಬಹುದಿತ್ತು. ಅದನ್ನು ಮಾಡಲಿಲ್ಲ. ಆ ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಹಿಂದೆ ಅಧಿಕಾರದಲ್ಲಿದ್ದಂತಹ ಸರ್ಕಾರಗಳು ಮಾಡಲಿಲ್ಲ. ಸುಮಾರು 20 ಲಕ್ಷ ಎಕರೆ ಜಮೀನಿಗೆ ಇನ್ನೂ ನೀರು ಬರುವಂತಹ ವ್ಯವಸ್ಥೆ ಆಗಬೇಕಾಗಿದೆ. ಅಂದರೆ ಸುಮಾರು 50 ಲಕ್ಷ ಎಕರೆ ಜಮೀನಿಗೆ ನೀರು ಕೊಡುವಂತಹ ಕಾರ್ಯ ಈ ಯೋಜನೆಯಲ್ಲಿ ಆಗಬೇಕಾಗಿದೆ. ಪುನರ್ ವಸತಿ ಕೆಲಸ ಈ ದಿಕ್ಕಿನಲ್ಲಿ ಇದುವರೆಗೆ ಯಾವುದೇ ರೀತಿಯ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಬಾಗಿಲುಕೋಟೆ ನಗರ ಮುಳುಗಿ ಹೋಗುತ್ತದೆ. ಅಲ್ಲಿ ಪುನರ್‌ನಿರ್ಮಾಣದ ಕೆಲಸ ಆಗಬೇಕು. ಅಲ್ಲಿ ಸತ್ಯಾಗ್ರಹ ನಡೆಯುತ್ತಿದೆ, ಚಳುವಳಿ ನಡೆಯುತ್ತಿದೆ. ಮಾರ್ಕೆಟ್‌ನಲ್ಲಿ ಸೈಟ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ, ಅದನ್ನು ಕೊಳ್ಳಲು

ಶಕ್ತಿ ಇಲ್ಲ. ಆ ಪುನರ್‌ವಸತಿಗೆ ಬೇಕಾದ ಸೌಟುಗಳನ್ನು ಕಡಿಮೆ ಬೆಲೆಯಲ್ಲಿ ಕೊಂಡುಕೊಂಡು ನಾವು ಬದುಕಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಆ ದಿಕ್ಕಿನಲ್ಲಿ ಯಾವುದೇ ರೀತಿಯ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಈ ರಾಜ್ಯದ ಶೇಕಡ 60 ಭಾಗ ನೀರಾವರಿ ಯೋಜನೆಗೆ ಉಪಯೋಗವಾಗುವಂತಹ ಈ ಜಲಾನಯನ ಪ್ರದೇಶ ಏನು ಇದೆ, ಇದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವಂತಹ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ ಎನ್ನುವಂತಹದು ದುಃಖ ತರುವಂತಹ ಸಂಗತಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈ ರಾಜ್ಯದಲ್ಲಿರುವ ಎಲ್ಲಾ ನೀರಾವರಿ ಮೂಲಗಳನ್ನು ಉಪಯೋಗಿಸಿಕೊಂಡರೂ ಕೂಡ ಶೇಕಡ 30 ಕ್ಕಿಂತ ಹೆಚ್ಚಿನ ಭೂ ಭಾಗವನ್ನು ನೀರಾವರಿ ಮಾಡಲು ಆಗುವುದಿಲ್ಲ ಎಂದು ಗೊತ್ತಿರುವಾಗ ಈ ಒಂದು ಜಲಾನಯನದಿಂದಲೇ ಶೇಕಡಾ 60 ರಷ್ಟು ಈ ರಾಜ್ಯದ ಭೂಮಿಗಳಿಗೆ ನೀರಾವರಿ ಆಗುತ್ತದೇನೋ ಎನ್ನುವಂತಹದು ಅದು ವಸ್ತು ನಿಷ್ಠ ಸಂಗತಿ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಮೀನಲ್ಲಿ ಆ ಭಾಗದಲ್ಲಿ ಶೇಕಡಾ 60 ರಷ್ಟು ಭಾಗ ನೀರಾವರಿ ಆಗುವುದಕ್ಕೆ ಸಾಧ್ಯ ಇದೆ ಎಂದು ವೈಪದತ್ತವಾಗಿರುವಂತಹ ಹೇಳಿದೆ ಮತ್ತೆ ಯೋಜನೆಯಿಂದ ಆಂಧ್ರಪ್ರದೇಶ, ಮಹಾರಾಷ್ಟ್ರಕ್ಕಿಂತ ಹೆಚ್ಚು ಜಮೀನು ನಾವು ನೀರಾವರಿ ಮಾಡಲು ಸಾಧ್ಯ ಇದೆ. ಕರ್ನಾಟಕದಲ್ಲಿ 43.8 ಪರ್ಸೆಂಟ್ ನಾವು ನೀರಾವರಿ ಮಾಡಿಕೊಳ್ಳಬಹುದು. ಆದರೆ ಅದೇ ಆಂಧ್ರ ಪ್ರದೇಶದಲ್ಲಿ 29.4 ಪರ್ಸೆಂಟ್ ಮಾತ್ರ, ಮಹಾರಾಷ್ಟ್ರದಲ್ಲಿ 26.8 ಪರ್ಸೆಂಟ್ ಮಾತ್ರ. ಅಂದರೆ ಈ ಯೋಜನೆಯಿಂದ ಬಿಜಾಪುರ, ರಾಯಚೂರು ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಿನ ಹೊಳೆಯನ್ನು ಹರಿಸಬಹುದು, ಸಮೃದ್ಧಿಯಿಂದ ಅವರ ಕಾಲ ಮೇಲೆ ಬದುಕುವಂತಹ ಒಂದು ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯ ಇರುವಂತಹ ದೇವ ದುರ್ಲಭವಾದಂತಹ ಯೋಜನೆಯ ಅನುಕೂಲ ನಮಗೆ ಇದೆ. ಈ ಮುಳುವಾದು ಲಿಫ್ಟ್ ಇರಿಗೇಷನ್ ಒಂದರಲ್ಲಿಯೇ ಸುಮಾರು 280 ರಿಂದ 300 ಕೋಟಿ ರೂಪಾಯಿಯನ್ನು ನಾವು ಖರ್ಚು ಮಾಡಿದರೆ 31 ಸಾವಿರ ಹೆಕ್ಟೇರ್‌ಗೆ ನೀರಾವರಿ ಮಾಡಲು ಸಾಧ್ಯ ಇದೆ. ಒಂದೇ ಒಂದು ಲಿಫ್ಟ್ ಇರಿಗೇಷನ್ ನಿಂದ ಅದರ ಪಕ್ಕದಲ್ಲಿ ಇನ್ನೆರಡು ಲಿಫ್ಟ್ ಇರಿಗೇಷನ್ ಇದೆ ಅಲಮಟ್ಟಿ ಲೆಫ್ಟ್ ಬ್ಯಾಂಕ್ ಲಿಫ್ಟ್ ಇರಿಗೇಷನ್ ಮತ್ತು ಅಲಮಟ್ಟಿ ರೈಟ್ ಬ್ಯಾಂಕ್ ಲಿಫ್ಟ್ ಇರಿಗೇಷನ್ ಈ ಎರಡು ಲಿಫ್ಟ್ ಇರಿಗೇಷನ್‌ಗೆ ಸುಮಾರು 275 ಕೋಟಿ ರೂಪಾಯಿಯನ್ನು ನಾವು ಖರ್ಚು ಮಾಡಲಿಕ್ಕೆ ಸಾಧ್ಯ ಇದ್ದರೆ 31 ಸಾವಿರ ಹೆಕ್ಟೇರ್ ಜಮೀನಿಗೆ ನೀರಾವರಿಯನ್ನು ಕೊಡುವುದಕ್ಕೆ ಸಾಧ್ಯ ಇದೆ. ಈ ಕೆಲಸವನ್ನು ನಾವು 10 ವರ್ಷಗಳ ಮುಂಚೆ ಮಾಡಿದ್ದೆವು ಎಂದು ಇಟ್ಟುಕೊಳ್ಳಿ, ಐದಾರು ವರ್ಷಗಳ ಹಿಂದೆ ನಾವು ಮಾಡಿದ್ದೆವು ಎಂದು ಇಟ್ಟುಕೊಳ್ಳಿ. ಅದೆಷ್ಟು ಕೋಟ್ಯಾಂತರ ರೂಪಾಯಿಯನ್ನು ನಾವು ದುಡಿಯುವುದಕ್ಕೆ ಸಾಧ್ಯ ಆಗುತ್ತಿತ್ತು? ನಮ್ಮ ಒಂದು ಪ್ರಾಮಾಣಿಕ ಪ್ರಯತ್ನ, ಮುಂದಾಲೋಚನೆ, ಚಿಂತನೆ ಇಲ್ಲದ

ಪರಿಣಾಮ ಯಾವ ರೀತಿ ಆ ನೀರಾವರಿ ಯೋಜನೆಗಳಿಂದ ರೈತನಿಗೆ ಅನುಕೂಲ ಆಗಬೇಕಿತ್ತು, ಆ ರೈತನಿಗೆ ಮಂಚನ ಮಾಡಿದವು ಎನ್ನುವುದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ವಿದ್ಯುಚ್ಛಕ್ತಿ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ವಿದೇಶಿಗರನ್ನು ಪ್ರಾರ್ಥನೆ ಮಾಡಿ, ಇಲ್ಲಿಗೆ ಬನ್ನಿ ಎಂದು ಅಂಗಲಾಚುವಂತಹ ಒಂದು ಪ್ರಯತ್ನ ಆಗುತ್ತಿದೆ. ಮಲ್ಟಿ ನ್ಯಾಶನಲ್ ಇನ್‌ವೆಸ್ಟಮೆಂಟ್‌ಗೆ ನಾವೇ ವಿನಂತಿ ಮಾಡುತ್ತಿದ್ದೆವೆ. ಇವತ್ತು ಆಲಮಟ್ಟಿ ಡ್ಯಾಮಿನ ಮೂಲಕ ಹರಿಯುವಂತಹ ಈ ಒಂದು ಬಲಡಂಡೆ ಒಂದರಿಂದಲೇ ಸುಮಾರು 260 ಮೆಗಾವ್ಯಾಟ್ ವಿದ್ಯುತ್ತನ್ನು ನಾವು ತೆಗೆದುಕೊಳ್ಳಲು ಸಾಧ್ಯ ಇದೆ ಸನ್ಮಾನ್ಯ ಸಿಂಧ್ಯಾರವರೇ, ಕೇವಲ ಆಲಮಟ್ಟಿ ಡ್ಯಾಮಿನ ಬಲದಂಡೆ ನಾಲೆಯಿಂದ ಇಷ್ಟು ಸಾಧ್ಯವಿದೆ ಈ ಸರ್ವೆಪರದಿ ಪ್ರಕಾರ ನಾರಾಯಣಪುರ ಒಂದು ರಿಸರ್‌ವಾಯರ್‌ನಿಂದ ಸುಮಾರು 760 ಮೆಗಾವ್ಯಾಟ್ ವಿದ್ಯುತ್ ತರುವುದಕ್ಕೆ ಸಾಧ್ಯ ಇದೆ ಎಂದು ಹೇಳಿ ತಜ್ಞರು ಸಲಹೆ ಕೊಟ್ಟಿದ್ದಾರೆ. ವರದಿ ನಮ್ಮ ಹತ್ತಿರ ಸಿದ್ಧ ಇದೆ. ಎಂದರೆ ಒಟ್ಟು ಸುಮಾರು 1040 ಮೆಗಾವ್ಯಾಟ್ ವಿದ್ಯುತ್ತನ್ನು ನೀವಿಂದು ಆಲಮಟ್ಟಿ ಡ್ಯಾಮಿನ ಬಲದಂಡೆ ನಾಲೆಯಿಂದ ನಾರಾಯಣಪುರ ರಿಸರ್ವಾಯರ್‌ನಿಂದ ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಅಂದರೆ 1000 ಮೆಗಾವ್ಯಾಟ್ ವಿದ್ಯುತ್ತನ್ನು ಈ ನಾಡಿನ ಜನರಿಗೆ ಕೊಡಲು ಸಾಧ್ಯ ಇರುವಂತಹ ಈ ಯೋಜನೆ, ರೈತನ ಹೊಲಕ್ಕೆ ನೀರು ಒಂದು ಕಡೆ ಮತ್ತೊಂದು ಕಡೆ ವಿದ್ಯುತ್ ಉತ್ಪನ್ನ ಮಾಡುವದಕ್ಕೆ ಸುಲಭವಾಗಿ ಆಗುತ್ತಿರತಕ್ಕಂಥ ಅತ್ಯಂತ ಕಡಿಮೆ ಬೆಲೆಯಲ್ಲಿ ವಿದ್ಯುತ್ ಕೊಡಬಹುದು. ಅಬ್ಬಬ್ಬಾ ಎಂದರೆ ಒಂದು ಮೆಗಾವ್ಯಾಟ್‌ಗೆ ಒಂದು ಸಾವಿರ ರೂಪಾಯಿ ಖರ್ಚಾಗುವುದಿಲ್ಲ. ಇಲ್ಲಿ ಇವತ್ತು ಎರಡೂವರೆ, ಮೂರು ಸಾವಿರ ಮೆಗಾವ್ಯಾಟ್‌ಗೆ ಖರ್ಚು ಮಾಡುತ್ತೇವೆ ಕೊಜೆಂಟ್ರಿಕ್ಸ್‌ಗೆ ಬರುವ ದೊತ್ತಿಗೆ ಎಂದು ಹೇಳುತ್ತೀರಲ್ಲ, ಇಲ್ಲಿಗೂ ಅದೇ ಒಂದು ಕಳಕಳಿಯನ್ನು ತೋರಿಸಿದರೆ, ಕರ್ನಾಟಕ ರಾಜ್ಯ ಇವತ್ತು ವಿದ್ಯುತ್ ಬರದಿಂದ ಇರಲಿಕ್ಕೆ ಸಾಧ್ಯ ಇರಲಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಇದುವರೆಗೆ ಆಗಲಿಲ್ಲ ಎನ್ನುವಂತಹದು ತುಂಬಾ ದುಃಖ ತರುವಂತಹ ಸಂಗತಿಯಾಗಿದೆ.

5.00 ಪಿ.ಎಂ.

ಇವೊತ್ತು ಅನೇಕ ಕೊರತೆಗಳಿಂದ ಇಂತಹ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಅಗತ್ಯವಾಗಿ ಬೇಕಾದಂಥ ಸಿಬ್ಬಂದಿಯ ಕೊರತೆಯೂ ಸಹ ಇದೆ. ಸಿಬ್ಬಂದಿಯನ್ನು ನೇಮಿಸುವಂಥ ಕೆಲಸವೂ ಆಗಲಿಲ್ಲ. ಒಂದು ರೀತಿ ಇವೆಲ್ಲದರ ಬಗ್ಗೆ ಸರ್ಕಾರ ಸಂಪೂರ್ಣ ನಿರ್ಲಕ್ಷಿಸಿಕೊಂಡು ನಿದ್ರೆ ಮಾಡುತ್ತಿರುವಂಥ ಕೃಷ್ಣಾ ಮೇಲ್ದಂಡೆ ಯೋಜನೆಗೆ ಜೋಗುಳ ಹಾಡುವಂಥ ಕೆಲಸವನ್ನು ಅಧಿಕಾರದಲ್ಲಿದ್ದವಂಥ ಎಲ್ಲಾ ಸರ್ಕಾರಗಳೂ ಕೂಡ ಮಾಡಿಕೊಂಡು ಬಂದಿವೆ. ಇನ್ನು ವಿಶ್ವಬ್ಯಾಂಕ್ ನೆರವಿನಿಂದ ಮುಖ್ಯವಾಗಿ ಇರತಕ್ಕ ಆಲಮಟ್ಟಿ ಅಣೆಕಟ್ಟಿನ ಕೆಲಸ ಸಹ ಈಗ ನಡೆದಿದೆ. ಆದರೆ, ಇವೊತ್ತು ಅಣೆಕಟ್ಟಿನ ಕಾರ್ಯವನ್ನು ಪೂರ್ಣಗೊಳಿಸಿದರೂ ಸಹ ಚಾನಲ್‌ಗಳನ್ನು ತೆಗೆಯದಿರುವ ಪರಿಣಾಮ ಆ ಭಾಗದ ರೈತರಿಗೆ ನೀರನ್ನು

ಕೊಡುವುದಕ್ಕಾಗುತ್ತಿಲ್ಲ. ಈಗಾಗಲೇ ಮುಳುಗಡೆಯಾಗುವ ಬಾಗಲಕೋಟೆ ಪ್ರದೇಶದ ಪರಿಸ್ಥಿತಿ ಏನಾಗ ಬಹುದು? ತಾವು ಆ ಕುರಿತು ಪುನರ್ವಸತಿ ಯೋಜನೆಯ ಬಗ್ಗೆ ವಿಶೇಷವಾಗಿ ಗಮನಕೊಟ್ಟಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಬಾಗಲಕೋಟೆ ನಗರವು ಮುಳುಗಡೆಯಾಗಲಿರುವುದರಿಂದ ಆ ನಗರವನ್ನು ಸ್ಥಳಾಂತರಿಸುವ ಕಾರ್ಯ, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಹಾಗೂ ಪುನರ್ವಸತಿಗೆ ಸಂಬಂಧಿಸಿದಂತೆ ಸರ್ಕಾರ ಅಗೆಮನಸ್ಸಿನಿಂದ ಇವೊತ್ತು ಪ್ರಯತ್ನಗಳನ್ನು ಮಾಡುತ್ತಿದೆ. ಸುಮಾರು ಒಂದು ಲಕ್ಷದಷ್ಟು ಜನಸಂಖ್ಯೆ ಹೊಂದಿರುವಂಥ ಈ ನಗರಕ್ಕೆ ಕೈಗಾರಿಕೆಗೆ ಬೇಕಾದಂಥ ಹಾಗೂ ಶೈಕ್ಷಣಿಕವಾಗಿ ಎಲ್ಲಾ ಅನುಕೂಲತೆಗಳಿದ್ದು, ಇದನ್ನು ಅಭಿವೃದ್ಧಿಗೊಳಿಸುವ ಕಡೆ ವಿಶೇಷ ಗಮನವನ್ನು ಸರ್ಕಾರ ಕೊಡಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಒಟ್ಟು 235 ಹಳ್ಳಿಗಳು ಮುಳುಗಡೆಯಾಗಲಿದ್ದು, ಪ್ರಮುಖವಾಗಿ ಬಾಗಲಕೋಟೆ ಪಟ್ಟಣ ಮುಳುಗಡೆಯಾಗಲಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಒಂದನೇ ಘಟ್ಟದಲ್ಲಿ ಸುಮಾರು 95 ಹಳ್ಳಿಗಳು, ಎರಡನೇ ಘಟ್ಟದಲ್ಲಿ 64 ಹಳ್ಳಿಗಳು, ನಾರಾಯಣಪುರ ಜಲಾಶಯ ಯೋಜನೆಯಡಿ 41 ಹಳ್ಳಿಗಳು ಹಾಗೂ ಆಲಮಟ್ಟಿ ಜಲಾಶಯ ಯೋಜನೆಯಡಿ 136 ಹಳ್ಳಿಗಳು ಮುಳುಗಡೆಯಾಗಲಿವೆ. ಆದರೆ, ಈ ಹಳ್ಳಿಗಳ ಪುನರ್ವಸತಿ ಕಾರ್ಯ ಇದುವರೆವಿಗೂ ಆಗಿಲ್ಲ. ಅಲ್ಲದೆ, ಈ ಎರಡು ಜಲಾಶಯಗಳಲ್ಲಿ, ಸಂಗಮದಲ್ಲಿ ಸಂಗಮೇಶ್ವರ ದೇವಸ್ಥಾನ, ಕೂಡಲ ಸಂಗಮ ಶ್ರೀ ಬಸವೇಶ್ವರ ಮಂಟಪ ಹಾಗೂ ತಂಗಡಿಕೆ ಹತ್ತಿರವಿರುವ ನೀಲಾಂಬಿಕೆ ದೇವಸ್ಥಾನ. ಈ ರೀತಿಯನ್ನು ಅನೇಕ ದೇವಸ್ಥಾನಗಳು ಸಹ ಇವೊತ್ತು ಮುಳುಗಡೆಯಾಗುವ ಸಂದರ್ಭವಿದೆ. ಈ ಧಾರ್ಮಿಕ ಕ್ಷೇತ್ರಗಳ ರಕ್ಷಣೆಯಾಗಬೇಕಾಗಿದೆ. ಇದಕ್ಕೋಸ್ಕರ ಒಂದು ಪ್ರತ್ಯೇಕ ಪ್ರಾಧಿಕಾರದ ರಚನೆ ಮಾಡಿ ಆ ದೇವಸ್ಥಾನಗಳನ್ನು ಉಳಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಇವೊತ್ತು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ಪ್ರಮುಖವಾದ ಅಂಶವೇನೆಂದರೆ, ಕ್ರಿ.ಶ. 2000 ಇಸವಿಯ ನಂತರ ಯಾವ ನೀರಾವರಿ ಯೋಜನೆಗಳನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದಯೋ ಆ ದಿಕ್ಕಿನಲ್ಲಿ ಈಗಿನಿಂದಲೂ ಸಹ ವಿಶೇಷವಾದ ಒಂದು ಪ್ರಯತ್ನ ನಮ್ಮ ಕಡೆಯಿಂದ ಆಗಬೇಕಾಗಿದೆ. ಕ್ರಿ.ಶ. 2000 ವರ್ಷಗಳ ನಂತರ ನಾವು ನಿಗದಿತ ಅವಧಿಯೊಳಗೆ 173 ಟಿಎಂಸಿಯಷ್ಟು ಪ್ರಮಾಣದ ನೀರನ್ನು ಬಳಸದೇ ಇದ್ದರೆ ಉಳಿದ ನೀರನ್ನು ಏನು 2000 ಇಸವಿಯ ನಂತರ ಕೊಡುವುದಿದೆಯೋ ಆ ನೀರಿನ ಪಾಲನ್ನು ಕೇಳುವಂಥ ಹಕ್ಕಿಗೆ ಚ್ಯುತಿ ಬರಬಹುದೆಂಬ ಭಯ ಇವೊತ್ತು ನಮ್ಮನ್ನು ಕಾಡುತ್ತಿದೆ. ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ನಾರಾಯಣಪುರ ಜಲಾಶಯದ ಅಣೆಕಟ್ಟು ಏನು ಪೂರ್ಣಗೊಂಡಿದೆ, ಇದರ ಕಾಲುವೆ ಕೆಲಸಗಳನ್ನು ನಾವು ತೀವ್ರಗೊಳಿಸಬೇಕಾಗಿದ್ದು, ಇದು, 4,24,935 ಹೆಕ್ಟೇರ್‌ಗಳಷ್ಟು ಪ್ರದೇಶಗಳ ಒಳಪಡಬೇಕಾಗಿದೆ. ಇದುವರೆಗೆ ಸುಮಾರು 1,81,826

ಹಕ್ಟೇರ್ ಪ್ರದೇಶಗಳ ಸಾಮರ್ಥ್ಯಕ್ಕೆ ಮಾತ್ರ ನಾವು ಉಪಯೋಗಿಸಿಕೊಳ್ಳಬೇಕಾದರೆ ರಾಯಚೂರಿಗೆ ನೀರು ಕೊಡುವ ಮೂಲಕ ಸುಮಾರು ನೂರು ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ಈ ಕಾಲುವೆ ಉದ್ದವಿದೆ. ಈ ಕಾಲುವೆಯನ್ನು ತಗೆಯುವುದರಿಂದ ರಾಯಚೂರು ಜಿಲ್ಲೆಯ ದೇವದುರ್ಗ ಮತ್ತು ಲಿಂಗಸುಗೂರು ತಾಲ್ಲೂಕಿಗೆ ನೀರು ಕೊಡುವಂಥ ಯೋಜನೆಯನ್ನು ತ್ವರಿತಗತಿಯಿಂದ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಅದೇ ರೀತಿ ಭೀಮಾ ಏತ ನೀರಾವರಿ ಯೋಜನೆ ಏನಿದೆ, ಈ ಯೋಜನೆಯನ್ವಯ 6 ಟಿಎಂಸಿ ನೀರನ್ನು ಕ್ರಿ.ಶ. 2000 ವರ್ಷದೊಳಗೆ ಉಪಯೋಗಿಸಿಕೊಳ್ಳಬೇಕಾಗಿದೆ. ಸದರಿ ಯೋಜನೆಯ ಅಂದಾಜು ಸುಮಾರು 107 ಕೋಟಿ 70 ಲಕ್ಷವಿದ್ದರೆ ಇದುವರೆಗೆ ಖರ್ಚು ಮಾಡಿರುವುದು ಕೇವಲ ಕೋಟಿ 14 ಲಕ್ಷ ರೂಪಾಯಿಗಳು ಮಾತ್ರ. 1995-96ನೇ ಸಾಲಿನಲ್ಲಿ ಈ ಯೋಜನೆಗೆ 150 ಲಕ್ಷ ರೂಪಾಯಿಗಳನ್ನು ತಾವು ಒದಗಿಸಿದ್ದೀರಿ. ಅಂದರೆ,ಈ ರೀತಿಯಲ್ಲಿ ನೀವು ಹಣವನ್ನು ಖರ್ಚು ಮಾಡುತ್ತಾ ಹೋದರೆ ಕ್ರಿ.ಶ. 2000 ಇಸವಿಯೊಳಗೆ 12ಕೋಟಿ 14 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರೆಂದು ಹೇಳಿದೆ. 1995-96ನೇ ಸಾಲಿನಲ್ಲಿ 150 ಲಕ್ಷ ರೂಪಾಯಿಗಳು ಅಂದರೆ ಒಂದೂವರೆ ಕೋಟಿ ರೂಪಾಯಿಯಷ್ಟು ದರದಲ್ಲಿ ನೀವು ಕೊಟ್ಟರೆ ಕ್ರಿ.ಶ. 2050ನೇ ವರ್ಷಕ್ಕೂ ಆಗಿರುವುದಿಲ್ಲ. ಯಾವ ಒಂದು ಯೋಜನೆ ಪ್ರಾರಂಭವಾಗದೆ ಒಂದು ರೀತಿ 'ತಿರುಪತಿ ಕ್ಷೌರ' ಆಗದೇ ಅದನ್ನು ಪೂರ್ಣಗೊಳಿಸುವ ಕಡೆ ಅಗತ್ಯವಿರುವ ಹಣವನ್ನು ಬಿಡುಗಡೆ ಮಾಡುವ ಪ್ರಯತ್ನ ತಮ್ಮ ಕಡೆಯಿಂದಾಗಬೇಕು. ಅದಕ್ಕೆ ತಾವು ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರೋ ಗೊತ್ತಿಲ್ಲ. ಅದೇ ರೀತಿ ಹಿಪ್ಪರಗಿ ಯೋಜನೆಯನ್ನು ಕ್ರಿ.ಶ. 2000 ವರ್ಷದೊಳಗೆ ಮುಗಿಸಬೇಕಾಗಿದೆ. ಈ ಯೋಜನೆಯ ಇತ್ತೀಚಿನ ಅಂದಾಜು 15 ಸಾವಿರ ಲಕ್ಷ ರೂಪಾಯಿಗಳು ಅಂದರೆ 150 ಕೋಟಿ ರೂಪಾಯಿಗಳು 1995-96ರಲ್ಲಿ, 1,594 ಲಕ್ಷ ರೂಪಾಯಿಗಳು ಖರ್ಚು ಮಾಡಿದ್ದೀರಿ ಮತ್ತು ಆ ಸಾಲಿನಲ್ಲಿ ತಾವು ಅನುದಾನ ಕೊಟ್ಟಿರುವುದು ಕೇವಲ 400 ಲಕ್ಷ ರೂಪಾಯಿಗಳು ಮಾತ್ರ ಅಂದರೆ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಈಗ ಹಿಪ್ಪರಗಿ ಬ್ಯಾರೇಜ್‌ನ ತಳಪಾಯದ ಕೆಲಸ ಮಾತ್ರ ಪ್ರಾರಂಭವಾಗಿದ್ದು, ಅದಕ್ಕೂ ಸಹ ಅಗತ್ಯವಿರುವ ಹಣವನ್ನು ಬಿಡುಗಡೆ ಮಾಡದೆ ಅದೂ ಸಹ ಒಂದು ರೀತಿಯ ತ್ರಿಶಂಕು ಸ್ಥಿತಿಯಲ್ಲಿರುವುದು ತಮ್ಮ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಘಟಪ್ರಭಾ ಯೋಜನೆಯಲ್ಲಿ ಒಂದು ಎತ್ತು ಎರಡನೇ ಹಂತದ ಕಾಮಗಾರಿಗಳು ಇವೊತ್ತು ಪ್ರಾರಂಭವಾಗಿದೆ. ಆದರೆ, ಮೂರನೇ ಹಂತದ ಕಾಮಗಾರಿ ಕೆಲಸ ಪ್ರಾರಂಭವಾಗಬೇಕಾಗಿದೆ. 1995-96ನೇ ಸಾಲಿನಲ್ಲಿ ತಾವು 43 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರೂ ಈ ಬಗ್ಗೆ ನಿರೀಕ್ಷಿತ ಪ್ರಗತಿ ಆಗಿಲ್ಲ. ನಾನು ಯೋಜನೆಯ ಸ್ಥಳಕ್ಕೆ ಹೋಗಿ ಅಲ್ಲಿ ನಡೆಯುತ್ತಿರುವ ಕಾಮಗಾರಿ ಕೆಲಸಗಳನ್ನು ನೋಡಿಕೊಂಡು ಬಂದಿದ್ದೇನೆ. ಅಲ್ಲಿನ ಕಾಮಗಾರಿ ಕೆಲಸವನ್ನು ಅತ್ಯಂತ ತ್ವರಿತಗೊಳಿಸುವಂಥ ಅಗತ್ಯವಿರುವುದರಿಂದ ಆ

ದಿಕ್ಕಿನಲ್ಲಿ ತಾವು ವಿಶೇಷವಾಗಿ ಗಮನ ಕೊಡಬೇಕು. ಇನ್ನು ಅತ್ಯಂತ ಪ್ರಮುಖವಾಗಿರುವುದೆಂದರೆ, ತುಂಗಾ ಮೇಲ್ದಂಡೆ ಯೋಜನೆ. ಚುನಾವಣೆ ಬಂದಾಗ ಈ ಯೋಜನೆಯಲ್ಲಿ ಕೆಲಸ ಮಾಡುವಂಥ ಒಂದು ಪ್ರಾರಂಭ ಮಾತುಗಳನ್ನು ಹೇಳಿ ಅವೊತ್ತಿನಿಂದಲೂ ಸದರಿ ಯೋಜನೆ ಆಗಿಂದಾಗ್ಗೆ ಸ್ಥಗಿತವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಯೋಜನೆಯ ಅಂದಾಜು 38 ಸಾವಿರ ಲಕ್ಷ ರೂಪಾಯಿಗಳು ಮತ್ತು ಇದರ ಅಂತಿಮ ನೀರಾವರಿ ಸಾಮರ್ಥ್ಯ 94,700 ಹೆಕ್ಟೇರ್ ಪ್ರದೇಶಗಳಿಗೆ, ನೀರಾವರಿಯಾಗುವುದಿದೆ. ಇದುವರೆಗೆ ಆಗಿರುವ ಆರ್ಥಿಕ ಪ್ರಗತಿ ಕೇವಲ 455 ಲಕ್ಷ ರೂಪಾಯಿಗಳು. ಗೃಹ ಸಚಿವರು ಇದರ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುತ್ತಿದ್ದಾರೆಂದರೆ, ಅವರು ಬೇರೆ ಇಲಾಖೆ ಬಗ್ಗೆ ಚರ್ಚಿಸುತ್ತಿದ್ದಾರೋ ಏನೋ ಗೊತ್ತಿಲ್ಲ. ನಾನು ನೀರಾವರಿ ವಿಷಯದ ಬಗ್ಗೆ ಚರ್ಚಿಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದರು; ಏನೆಂದರೆ, ನಾನು ರೈಲ್ ಬಿಡ್ತೇನೆ, ಅವರು ನೀರು ಬಿಡುತ್ತಾರೆಂದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಹೇಳುತ್ತಿರತಕ್ಕ ಎಲ್ಲಾ ವಿಚಾರಗಳನ್ನು ಬರೆದುಕೊಳ್ಳುತ್ತಿದ್ದು, ಇದನ್ನು ನಾನು ಮುಖ್ಯಮಂತ್ರಿಗಳಿಗೆ ಪ್ರಾಮಾಣಿಕವಾಗಿ ಕೊಡುತ್ತೇನೆ.

ಶ್ರೀ ಎಸ್. ಕೃಷ್ಣಪ್ಪ : ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ. ನಾವು ಹೊಸ ಸದಸ್ಯರಾಗಿದ್ದೇವೆ. ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ, ಅವರು ಕೆಲವು ವಿಷಯಗಳನ್ನು ಮಾತನಾಡುವಾಗ ನಮಗನ್ನಿಸಿತು ಏನೆಂದರೆ, ಆಡಳಿತ ಪಕ್ಷವಿರಬಹುದು, ವಿರೋಧ ಪಕ್ಷವಿರಬಹುದು, ಅಧಿಕಾರದಲ್ಲಿ ಯಾವುದೇ ಸರ್ಕಾರವಿದ್ದರೂ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಮುಗಿಸಲೇಬೇಕೆಂದು ಮಾತನಾಡುತ್ತಿದ್ದೇವೆ. ಆದರೆ, ಒಂದು ವಿಷಯವನ್ನು ತಮ್ಮಲ್ಲಿ ಕೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ವಿರೋಧ ಪಕ್ಷದ ನಾಯಕರು ಭಾಷಣ ಮಾಡುವಾಗ ಯೋಜನೆಗೆ ಒದಗಿಸಿರುವ ಹಣ ಸಾಕಾಗಲಿಲ್ಲವೆಂದರು. ಆದರೆ, ನಾರಾಯಣಪುರ ಜಲಾಶಯ ಯೋಜನೆ, ಆಲಮಟ್ಟಿ ಜಲಾಶಯ ಯೋಜನೆ, ತುಂಗಾ ಮೇಲ್ದಂಡೆ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕಲ್ಲ. ಇವೆಲ್ಲವೂ ಸರಿ. ಸರ್ಕಾರ ಅನಿವಾರ್ಯವಾದ ವೆಚ್ಚ ಮಾಡುತ್ತಿದೆಯೆಂಬ ಮಾತನ್ನು ಹೇಳಿದರು. ಅನಿವಾರ್ಯ ವೆಚ್ಚ ಯಾವುದೆಂದು ಹೇಳಬೇಕಾಗುತ್ತದೆ. ಎರಡನೆಯದಾಗಿ, ಸರ್ಕಾರದವರು ಹಣ ಕಡಿಮೆ ಕೊಡುತ್ತಾರೆಂದು. ಹಣವನ್ನು ಎಲ್ಲಿಂದ ತರಬೇಕು? ಮೂರನೆಯದಾಗಿ, ಸದರಿ ಯೋಜನೆಯನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕೆಂಬುದಕ್ಕೆ ತಮ್ಮ ಸಲಹೆ ಏನು? ತಮ್ಮದು ವಿರೋಧ ಪಕ್ಷವೆಂದು ಬರೀ ವಿರೋಧ ಮಾಡಿಕೊಂಡು ಹೋಗುವುದಕ್ಕಿಂತ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಮುಗಿಸುವುದಕ್ಕೆ ಸಲಹೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪ್ರಾರಂಭದಲ್ಲಿ ಒಂದು ಮಾತನ್ನು ಹೇಳಿದೆ, ನಾನು ಕೇವಲ ನಿಮ್ಮ ಸರ್ಕಾರದ ಬಗ್ಗೆ ಮಾತನಾಡುತ್ತಿಲ್ಲ, ಕಳೆದ ಇಪ್ಪತ್ತಾರು ವರ್ಷಗಳಲ್ಲಿ ಯಾವ ವರ್ಷವೂ ಸಹ ನೂರು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಹಣವನ್ನು ಕೃಷ್ಣಾ ಯೋಜನೆಗೆ ಖರ್ಚು ಮಾಡಿಲ್ಲ.

ಶ್ರೀ ಎಸ್. ಕೃಷ್ಣಪ್ಪ : ಆ ವಿಚಾರ ಮುಗಿದು ಹೋಗಿದೆ, ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ರಾಜೀನಾಮೆಯನ್ನು ಕೊಟ್ಟು ನಮಗೆ ಅಧಿಕಾರವನ್ನು ಕೊಡಿ, ನಾವು ಐದು ವರ್ಷಗಳಲ್ಲಿ ಎಲ್ಲಾ ಕೆಲಸವನ್ನು ಪೂರ್ಣ ಮಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮಾಷೆಗೆ ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ, ಆ ಕಡೆ ಇರಲಿ, ಈ ಕಡೆ ಇರಲಿ ಜನರು ನಿಮಗೆ ಮತ್ತು ನಮಗೆ ಓಟನ್ನು ಕೊಟ್ಟಿದ್ದಾರೆ. ಆದರೆ ತಮಗೆ ಬಹುಮತ ಬಂದಿದೆ, ತಾವು ಅಧಿಕಾರದಲ್ಲಿದ್ದೀರಿ. ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಜನರು 1983ರಲ್ಲಿನ ನಮ್ಮ ಅಧಿಕಾರವನ್ನು ಮೆಚ್ಚಿ ಬಹುಮತವನ್ನು ಕೊಟ್ಟಿದ್ದಾರೆ. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಹೇಳಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಹಾಗಾದರೆ ನಾನು ಕೃಷ್ಣಾ ಜಲಾನಯನ ಪ್ರದೇಶದ ರೈತರನ್ನು ಒಟ್ಟುಗೂಡಿಸಿ ಬಡಿಗೆ ತೆಗೆದುಕೊಂಡು ವಿಧಾನಸೌಧದ ಸುತ್ತ ಹೋರಾಟ ಮಾಡಬೇಕೆ? ಅಥವಾ ಬಹುಮತ ಸಿಕ್ಕಿರತಕ್ಕ ನೀವು ದುಂದುವೆಚ್ಚ ಮಾಡಿಕೊಂಡಿರಬೇಕೆ. ಕೋರಮಂಗಲದಂಥ ಪ್ರಕರಣಗಳಲ್ಲಿ 150 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟು ಅದಕ್ಕೆ ಆದ್ಯತೆಯನ್ನು ಕೊಡತಕ್ಕ ನೀವು ರೈತರ ಹೊಲಕ್ಕೆ ನೀರನ್ನು ಕೊಡುವ ಯೋಜನೆಗೆ ಏಕೆ ಹೆಚ್ಚು ಗಮನ ಕೊಡುವುದಿಲ್ಲ? ರೈತರಿಗೆ ನೀರನ್ನು ಕೊಡುವ ಯೋಜನೆಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲವೆ? ಇದಕ್ಕೆ ನಾವೇನು ಹೇಳಬೇಕು. ತಾವು ಮಾಡಿರುವ ಒಳ್ಳೆಯ ಕೆಲಸದ ಬಗ್ಗೆ ನಾವು ಶ್ಲಾಘನೀಯವಾದ ಮಾತುಗಳನ್ನು ಹೇಳಿದ್ದೇವೆ. ಕೃಷ್ಣಾ ಜಲಭಾಗ್ಯ ನಿಗಮದಿಂದ ಎರಡು ಹಂತದಲ್ಲಿ ನಾಲ್ಕೂನೂರು ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುವುದಾಗಿ ಹೇಳಿದ್ದಿರಿ. ಅದನ್ನು ನಾವು ಶ್ಲಾಘಿಸುತ್ತೇವೆ. ಹಣವನ್ನು ಸಂಗ್ರಹ ಮಾಡಲು ಸಾಧ್ಯವಿದ್ದರೂ ಸಹ ಕಳೆದ ಎಂಟು ತಿಂಗಳುಗಳಲ್ಲಿ ಯಾವುದೇ ಕೆಲಸವನ್ನು ಮಾಡದಿದ್ದರೆ ನಾವೇನು ಹೇಳಬೇಕು. ಲೋಕಸಭಾ ಚುನಾವಣೆಗೆ ಇನ್ನು ಎರಡು ತಿಂಗಳುಗಳಿದ್ದಾಗ ಚುನಾವಣೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಎರಡು ತಿಂಗಳುಗಳಲ್ಲಿ ಇಡೀ ರಾಜ್ಯದ ಸಮಸ್ಯೆಯನ್ನು ನೋಡಲು ಹೋಗುತ್ತೀರ? ಅಲ್ಲಿ ಗುತ್ತಿಗೆ ಮಾಡುವವರನ್ನು ನಿಲ್ಲಿಸಿ, ಪೀಸ್

ವರ್ಕ್ ಮಾಡಿರಿ, ಮತ್ತೊಂದು ಮಾಡಿರಿ ಎಂದು ಅವರನ್ನು ಹೊರಕ್ಕೆ ಓಡಿಸಿ, ಅಧಿಕಾರದಲ್ಲಿದ್ದವರ ವಿಶ್ವಾಸವನ್ನು ಹಾಳುಮಾಡಿ, ನಿಮಗೆ ಯಾರ್ಯಾರು ಬೇಕೋ ಅವರೆಲ್ಲರನ್ನೂ ಕರೆದುಕೊಂಡು ಬಂದು ಟೆಂಡರ್ 20 ರಿಂದ 30 ಪರ್ಸೆಂಟ್ ಜಾಸ್ತಿ ಕೊಟ್ಟು ಕೊಟ್ಟಾಂತರ ರೂಪಾಯಿಗಳ ದುರುಪಯೋಗ ಮಾಡಿದ್ದೀರಿ. ಮಾನ್ಯ ಎಸ್.ಎಂ. ಕೃಷ್ಣಾರವರು ಉಪಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಯಡಿಯೂರಪ್ಪನವರೆ, ಇದರ ಬಗ್ಗೆ ವರ್ಷಕ್ಕೊಮ್ಮೆ ನೀವು ಕೇಳಬೇಡಿ ಪ್ರತಿ ತಿಂಗಳು ಕೃಷ್ಣಾ ಜಲಾನಯನ ಪ್ರದೇಶಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ ಅದರ ಪ್ರಗತಿಯನ್ನು ಹೇಳುತ್ತೇನೆಂದು ಹೇಳಿದ್ದರು. ಆ ಕಾಲವನ್ನೂ ನಾವು ನೋಡಿದೆವು. ಮಾನ್ಯ ದೇವೇಗೌಡರು ಬಂದರು. ಚುನಾವಣೆಗೆ ಮೊದಲು ಚುನಾವಣೆಯ ನಂತರ ನಾನು ಯಾವ ರೀತಿಯಲ್ಲಾದರೂ ಹಣವನ್ನು ತಂದು ಸಾವಿರ ಕೋಟಿ ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿದರು. ತಾವು ನೂರು ಕೋಟಿ, ಇನ್ನೂರು ಕೋಟಿ ಕಡಿಮೆ ಇಲ್ಲದಂತೆ ಖರ್ಚು ಮಾಡಿದ್ದರೆ ನಮಗೆ ಬೇಸರವಾಗುತ್ತಿರಲಿಲ್ಲ. ಆದರೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದುಕೊಂಡು ಪವಿತ್ರವಾದ ಈ ವೇದಿಕೆಯ ಮೇಲೆ ನಿಂತುಕೊಂಡು ಒಂದು ಸಾವಿರ ಕೋಟಿ ರೂಪಾಯಿಗಳನ್ನು ವರ್ಷ ನಾವು ಖರ್ಚು ಮಾಡಿಯೇ ತೀರುತ್ತೇವೆಂದು ಹೇಳಿದ್ದರು. ಆ ರೀತಿ ಹೇಳಿದ್ದನ್ನು ಅವರು ಕಾರ್ಯರೂಪಕ್ಕೆ ತರಬೇಕಲ್ಲವೆ? ಅದರ ಬಗ್ಗೆ ಪ್ರಾಮಾಣಿಕ ಪ್ರಯತ್ನವಾಗಬೇಕಲ್ಲವೆ? ಇವತ್ತು ಕೃಷ್ಣಾ ಜಲಾನಯನ ಪ್ರದೇಶದ ಬಗ್ಗೆ ಚರ್ಚೆಯಾಗುತ್ತದೆ, ಆ ಭಾಗದಿಂದ ಬಂದಿರುವಂಥ ಅನುಭವಿ ಮತ್ತು ಅದರ ಬಗ್ಗೆ ಸಾಕಷ್ಟು ಕಳಕಳಿ ಇರತಕ್ಕ ಮಾನ್ಯ ಖರ್ಗೆಯವರು ಮಾತನಾಡುವವರಿದ್ದಾರೆ, ಅವರ ಕಾಲದಲ್ಲಿ ಇದರ ಪ್ರಗತಿಯಾಯಿತೇ ಇಲ್ಲವೇ ಎಂಬ ಬಗ್ಗೆ ಅವರು ಮಾತನಾಡುವಾಗ ಹೇಳಬಹುದು. ಇವತ್ತು ಇದರ ಬಗ್ಗೆ ಚರ್ಚೆಯಾಗತಕ್ಕ ಕಾಲದಲ್ಲಿ ಇದರ ಬಗ್ಗೆ ಮಾನ್ಯ ಗೃಹ ಸಚಿವರು ಬರೆದುಕೊಂಡು ಅಂಕಿಅಂಶಗಳನ್ನು ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಬಹುದು, ಹೇಳಬಹುದು. ಆದರೆ ಮುಖ್ಯಮಂತ್ರಿಗಳಿಗೆ ಇದಕ್ಕಿಂತ ಬೇರೆ ಯಾವ ಕೆಲಸವಿದೆ? ಯಾವುದೋ ಸಮಾವೇಶ, ಸಮ್ಮೇಳನವಿರಬಹುದು, ಅದಕ್ಕೆ ಹೋಗಬಾರದೆಂದು ನಾನು ಹೇಳುವುದಿಲ್ಲ, ಸದನ ನಡೆಯಬೇಕಾದರೆ ಅವರು ಬೇಗನೆ ಧಾವಿಸಿ ಬರಬೇಕಲ್ಲವೆ? ನಾವೇನು ಹೇಳುತ್ತೇವೆ ಅದನ್ನು ತಿಳಿದುಕೊಳ್ಳತಕ್ಕ ಪ್ರಯತ್ನ ಮಾಡಬೇಕಲ್ಲವೆ? ಆಗಿರತಕ್ಕ ಕೊರತೆಗಳು, ಹೇಳಿರತಕ್ಕ ಆಶ್ವಾಸನೆಗಳು ಈಡೇರದಿದ್ದರೆ ಈಡೇರಿಸುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಡಬೇಕಲ್ಲವೇ? ಇವತ್ತು ನಮ್ಮ ಆಡಳಿತ ಪಕ್ಷದ ಮಿತ್ರರು ಏನು ಮಾಡಬೇಕು ಯಡಿಯೂರಪ್ಪರವರೆ ಹೇಳಿ ಎಂದು ಕೇಳಿದ್ದಾರೆ. ಇವತ್ತು ನಮ್ಮ ಪ್ಲಾನ್ ವೆಚ್ಚದಲ್ಲಿರುವ ಒಟ್ಟಾರೆ ಹಣದಲ್ಲಿ ಅರ್ಧಕ್ಕಿಂತ ಹೆಚ್ಚು ಹಣವನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಕೊಡಿಯೆಂದು ನಾನು ಹೇಳುತ್ತೇನೆ. ಬೇಕಾದರೇ ರಸ್ತೆಗಳು ಗುಂಡಿ ಬೀಳಲಿ. ರಸ್ತೆಗಳು ಗುಂಡಿಯಾಗುವಂತೆ ಮಾಡಿ ಕೆಲಸವನ್ನೇ ಮಾಡದೆ ಜಿಲ್ಲೆಯನ್ನು ತೆಗೆದುಕೊಳ್ಳುವುದು ನಿಲ್ಲಬೇಕೆಂದು ನಾವು ಹೇಳುತ್ತಿದ್ದೇವೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಒಂದು ಕಟ್ಟಡವನ್ನೂ ಕಟ್ಟುವುದಿಲ್ಲ, ರಸ್ತೆಗಳು ಗುಂಡಿ ಬಿದ್ದು

ಹಾಳಾಗಿಹೋಗಲಿ, ಹೊಸ ರಸ್ತೆಗಳಿಗೆ ಗುಂಡಿಗಳಿಗೆ ಬೇಕಾದರೆ ಮಣ್ಣುಹಾಕಿ ಮುಚ್ಚುತ್ತವೆ, ಇಲ್ಲಿ ಖರ್ಚು ಮಾಡುವ ಎಲ್ಲಾ ಹಣವನ್ನು ಕೃಷ್ಣಾ ಜಲಾನಯನ ಪ್ರದೇಶಕ್ಕೆ ಖರ್ಚು ಮಾಡುತ್ತೇವೆಂದು ತಾವು ಹೇಳಿ ಆಗ ನಾವು ನಿಮ್ಮನ್ನು ಮೆಚ್ಚಿಕೊಳ್ಳುತ್ತೇವೆ. ಕೇವಲ ಚುನಾವಣೆಯ ಸಮಯದಲ್ಲಿ ಪ್ರಚಾರಕ್ಕೆ ಹೊಸ ಹೊಸ ಕಾರ್ಯಕ್ರಮಗಳನ್ನು ಘೋಷಣೆ ಮಾಡಿಕೊಂಡು, ಈ ನಾಡಿನ ಜನರು ಕೊಟ್ಟಂಥ ತೆರಿಗೆಯ ಹಣವನ್ನು ಸದುಪಯೋಗ ಮಾಡಿಕೊಳ್ಳದೆಯೇ, ನಾನು ಕ.ಗ.ಪ.ಯಲ್ಲಿ, ಅಬ್ಕಾರಿಯಲ್ಲಿ, ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸಾವಿರ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆಯೆಂದು ತಮಗೆ ಪಟ್ಟಿಯನ್ನು ಕೊಟ್ಟಿ. ಆ ಹಣವನ್ನು ಏಕೆ ಬಿಡಬೇಕು? ಅವರುಗಳೇನು ನಮ್ಮ ಚಿಕ್ಕಪ್ಪನ ಮಕ್ಕಳೇ? ಸಾಲವನ್ನು ಕೊಡಬೇಕಾಗಿರುವವರ ಮನೆಗಳನ್ನು ಜಫ್ತಿ ಮಾಡಲು ಆಗುವುದಿಲ್ಲವೆ? ಹಣವನ್ನು ವಸೂಲಿ ಮಾಡಲು ಆಗುವುದಿಲ್ಲವೆ? ತಾವು ಅವರುಗಳು ಕೋರ್ಟಿಗೆ ಹೋಗಿದ್ದಾರೆಂದು ಹೇಳುತ್ತೀರಿ, ಆದರೆ ಆ ರೀತಿ ಕೋರ್ಟಿಗೆ ಹೋಗಲು, ಕೇಸನ್ನು ಹಾಕಲು ಹೇಳಿಕೊಟ್ಟವರು ನಮ್ಮ ಅಧಿಕಾರಿಗಳೇ ತಾನೆ? ನಾವು ಅವರುಗಳಿಂದ ಹಣವನ್ನು ವಸೂಲಿ ಮಾಡುವ ಬಗ್ಗೆ ತಡೆಯಾಜ್ಞೆಯನ್ನು ತರಲು ಅವಕಾಶ ಮಾಡಿಕೊಟ್ಟವರು ನಾವೇ ತಾನೆ? ಒಬ್ಬ ಸಾಮಾನ್ಯ ಮನುಷ್ಯ ತನ್ನ ಹೊಲದಲ್ಲಿ ಕೈಗಾರಿಕೆಯನ್ನು ಮಾಡುತ್ತಿದ್ದರೆ ಒಂದು ತಿಂಗಳಿನಲ್ಲಿ ವಿದ್ಯುತ್‌ನ ಚಾರ್ಜನ್ನು ಕಟ್ಟದಿದ್ದರೆ ಮಾರನೇ ದಿನವೇ ವಿದ್ಯುತ್ ಡಿಸ್‌ಕನೆಕ್ಟ್ ಕಡಿತಮಾಡುತ್ತೀರಿ? ಹಲವಾರು ಕೋಟಿ ರೂಪಾಯಿಗಳವರೆಗೆ ವಿದ್ಯುತ್ ಬಿಲ್ಲನ್ನು ಕಟ್ಟದಿದ್ದವರ ಮೇಲೆ ಏಕೆ ಕ್ರಮತೆಗೆದುಕೊಳ್ಳಲಿಲ್ಲ, ಅವರಲ್ಲಿ ಏಕೆ ಹಣವನ್ನು ಬಿಟ್ಟಿರಿ? ನಾನು ಇಲ್ಲಿ ವೈಯುಕ್ತಿಕವಾಗಿ ಯಾವ ಬಗ್ಗೆಯೂ ಮಾತನಾಡುತ್ತಿಲ್ಲ. ನಾನು ಹೇಳುತ್ತಿರತಕ್ಕ ಮಾತಿನಲ್ಲಿ ಪ್ರಾಮಾಣಿಕತೆ ಇದ್ದರೆ ತಾವು ಪರಿಶೀಲನೆ ಮಾಡಿ. ನನಗೆ ತಿಳಿದಿರತಕ್ಕ ವಿಷಯಗಳನ್ನು ನನ್ನ ಕರ್ತವ್ಯದ ಅನುಸಾರ ತಮಗೆ ತಿಳಿಸತಕ್ಕ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಕೃಷ್ಣಾ ಜಲಾನಯನ ಪ್ರದೇಶಕ್ಕೆ ಯಾವ ದಿಕ್ಕಿನಿಂದ ಹಣ ತರಬೇಕು ಎಂಬ ಬಗ್ಗೆ ನಾನು ಈ ರೀತಿ ಸಲಹೆಯನ್ನು ಕೊಡುತ್ತಿದ್ದೇನೆ. ಆ ಪ್ರಯತ್ನ ಇವತ್ತು ಆಗಲಿಲ್ಲ. ಕಳೆದ 26 ವರ್ಷಗಳಲ್ಲಿ 1990-91ರವರೆಗೆ ಒಂದು ವರ್ಷವೂ ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿಲಿಲ್ಲ. ಇಷ್ಟು ದೊಡ್ಡದಾದ ಯೋಜನೆ ಪೂರ್ಣವಾಗಬೇಕೆಂದಿದ್ದರೆ ಇಪ್ಪತ್ತಾರು ವರ್ಷಗಳಲ್ಲಿ ಸುಮಾರು ಇಪ್ಪತ್ತು ವರ್ಷದಲ್ಲಿ ಒಂದು ಸಂದರ್ಭದಲ್ಲೂ ಸಹ ನೂರು ಕೋಟಿ ಹಣವನ್ನು ಖರ್ಚು ಮಾಡಲಿಲ್ಲ. 1991-92ರಲ್ಲಿ ಮಾತ್ರ ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲು ಪ್ರಾರಂಭ ಮಾಡಿದರು. ಇದುವರೆಗೂ ಆ ಭಾಗದ ಜನರು ಶಾಂತರೀತಿಯಿಂದ ನಡೆದುಕೊಂಡರು, ಆದರೆ ಅವರಲ್ಲಿ ಈಗ ಮಂಬಿವಾಗುತ್ತಿದೆ, ಆ ಭಾಗದ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ, ದ್ರೋಹವನ್ನು ಬಗೆಯುತ್ತಿದ್ದಾರೆ, ಮಲತಾಯಿ ಧೋರಣೆಯನ್ನು ತೋರುತ್ತಿದ್ದಾರೆಂದು ಆ ಭಾಗದ ಜನರಲ್ಲಿ ಭಾವನೆ ಬರುತ್ತಿದೆ. ಇದನ್ನು ಸರಿಪಡಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಈ ಸಂದರ್ಭದಲ್ಲಿ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ದಯಮಾಡಿ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಭೂಸ್ವಾಧೀನ ಮಾಡುವುದಕ್ಕೆ ತಗಲತಕ್ಕ ಸಮಯವೇನಿದೆ ಅದನ್ನು ಮೊಟಕು ಮಾಡಿ ಅವಶ್ಯಕತೆ ಇದ್ದಲ್ಲಿ ರೈತರ ಜೊತೆ ಮಾತನಾಡಿ ನೇರವಾಗಿ ರೈತರಿಂದ ಜಮೀನನ್ನು ಪಡೆಯತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಆದರೆ ತಾವು ಆ ಗುತ್ತಿಗೆದಾರರೇ ಕಾಲುವೆ ಯಾವ ಜಮೀನಿನ ಮೇಲೆ ಹೋಗುತ್ತದೆ ಆ ಜಮೀನುದಾರರಿಂದ ಭೂಮಿಯನ್ನು ಕೊಂಡುಕೊಂಡು ಕಾಲುವೆ ತೋರತಕ್ಕ ಕೆಲಸವನ್ನು ಮಾಡಬೇಕೆಂದು ಹೇಳಿದ್ದೀರಿ. ಇದರಿಂದ ಶೋಷಣೆ ಪ್ರಾರಂಭವಾಗಿದೆ. ಆ ಗುತ್ತಿಗೆದಾರ ರೈತರಿಗೆ ಮೋಸ ಮಾಡಿ ಜಮೀನನ್ನ ತೆಗೆದುಕೊಂಡು ಜಮೀನುದಾರರಿಗೆ ಸರಿಯಾದ ಪರಿಹಾರ ಸಿಗುತ್ತಿಲ್ಲ. ಎಲ್ಲಿ ಕಾಲುವೆ ಹೋಗುತ್ತದೆ, ಆ ರೈತನ ಮನವನ್ನು ಒಲಿಸಿ ನಿಮಗೆ ಬೇಕಾದ ಅನುಕೂಲವನ್ನು ಮಾಡಿಕೊಡುತ್ತೇವೆ, ನಿಮ್ಮ ಒಂದು ಎಕರೆ ಜಮೀನು ಹೋದರೆ ನಿಮ್ಮ ಮನೆಯ ಒಬ್ಬರಿಗೆ ಉದ್ಯೋಗವನ್ನು ಕೊಡುತ್ತೇವೆಂದು ಸರ್ಕಾರ ಹೇಳಲಿ. ಆ ಜಮೀನು 25 ಸಾವಿರ ಬೆಲೆ ಬಾಳುವುದಿದ್ದರೆ 50 ಸಾವಿರ ರೂಪಾಯಿ ಕೊಡಿ. ನಿನ್ನೆ ಮಾನ್ಯ ಜಾಲಪ್ಪನವರು ಮಾತನಾಡುತ್ತ ಆ ಬಡವ, ಆ ರೈತ, ಅವನ ಪರಿಸ್ಥಿತಿಯ ಬಗ್ಗೆ ಹೇಳಿದ್ದರು. ಈ ರಾಜ್ಯದ ಜನರಿಗೆ ನೀರನ್ನು ಕೊಡಲು ಜಮೀನು ಬಿಟ್ಟುಕೊಟ್ಟಾಗ ಮಾರುಕಟ್ಟೆಯ ಬೆಲೆಗಿಂತ ಒಂದು ಎಕರೆಗೆ 25 ಸಾವಿರ ರೂಪಾಯಿ ಜಾಸ್ತಿ ಕೊಟ್ಟರೆ ನಿಮಗೇನು ನಷ್ಟವಾಗುತ್ತದೆ? ಅದನ್ನು ನಾವೇನಾದರು ವಿರೋಧ ಮಾಡಿದ್ದೇವೆಯೇ? ಈ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡಬೇಕಾಗಿದೆ. ನೂರು ಕೋಟಿ ಖರ್ಚು ಮಾಡಬೇಕಾಗಿರುವ ಕಡೆಗಳಲ್ಲಿ ವರ್ಷಕ್ಕೆ 5-6 ಕೋಟಿ ಖರ್ಚು ಮಾಡಿದರೆ 20 ವರ್ಷಗಳಾದರೂ ಕೆಲಸ ಮುಗಿಯುವುದಿಲ್ಲ. ಆಣೆಕಟ್ಟೆಯನ್ನು ನಿರ್ಮಾಣ ಮಾಡಿಯಾಗಿದೆ, ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರತಕ್ಕದ್ದು ವ್ಯರ್ಥವಾಗುತ್ತಿದೆ. ಅಲ್ಲಿ ಮಾಡಬೇಕಾಗಿರುವ ಕಾಲುವೆಗಳನ್ನು ಮಾಡಲು ತಮ್ಮಿಂದ ಸಾಧ್ಯವಾಗದಿದ್ದರೆ, ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವಾಗದಿದ್ದರೆ ನಾವೇನು ಮಾಡಲು ಸಾಧ್ಯವಾಗುತ್ತದೆ? ನಮ್ಮ ಪ್ರಾಮಾಣಿಕ ಅಧಿಕಾರಿಗಳು ಅಲ್ಲಿದ್ದಾರೆ. ನಾವು ಅಲ್ಲಿಗೆ ಒಬ್ಬರು ಸಚಿವರನ್ನು ಪ್ರತ್ಯೇಕವಾಗಿ ನೇಮಕ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಹಲವಾರು ಬಾರಿ ಕೇಳಿಕೊಂಡೆವು. ತಮಗೆ ಸರಿಯೆಂದು ಕಂಡು ಬರುವಂಥವರನ್ನು, ಅದರ ಬಗ್ಗೆ ಯಾರಿಗೆ ಕಾಳಜಿ ಇರುತ್ತದೆಯೋ ಅವರನ್ನು ಅಲ್ಲಿಗೆ ಮಂತ್ರಿಗಳನ್ನಾಗಿ ನೇಮಕ ಮಾಡಬೇಕು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಐದು ವರ್ಷದಿಂದ ಎರಡು ಸಾವಿರ ಇಸವಿಯೊಳಗೆ ಕೆಲಸವು ಪೂರ್ಣವಾಗುವವರೆಗೆ 24 ಗಂಟೆಗಳ ಕಾಲ ಆ ಮಂತ್ರಿ ಅಲ್ಲಿರುತ್ತಾರೆ. ಏನೇ ಸಮಸ್ಯೆ ಬಂದರು ಆ ಮಂತ್ರಿ ಸ್ಥಳ ಬಗೆಹರಿಸುತ್ತಾನೆ. ಅದು ಯಾವುದೇ ರೀತಿಯಾದ ಸಮಸ್ಯೆ ಇರಬಹುದು. ಈ ರಾಜ್ಯದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಲೂಟಿಯಾಗಿದೆ. ತಾವು ಅಲ್ಲಿಗೆ ಪ್ರತ್ಯೇಕವಾದ ಮಂತ್ರಿಗಳನ್ನು ಹಾಕುವುದರಿಂದ ನೂರು ಕೋಟಿ ರೂಪಾಯಿಗಳು ವ್ಯರ್ಥವಾದರೂ ಚಿಂತೆ ಇಲ್ಲ, ಆ ಮಂತ್ರಿಗಳು ಸ್ಥಳದಲ್ಲಿ ಇದ್ದುಕೊಂಡು ರೈತರಿಗೆ ಪರಿಹಾರವನ್ನು ಕೊಟ್ಟು, ಜಮೀನನ್ನು

ಕೊಂಡುಕೊಂಡು, ಅಲ್ಲಿನ ಗುತ್ತಿಗೆದಾರರೊಂದಿಗೆ ಮಾತನಾಡಿ ಅಲ್ಲಿನ ಪ್ರಗತಿಯನ್ನು ನೋಡ ಪ್ರತಿ ದಿನವೂ ನಮಗೆ ಪ್ರೊಗ್ರೆಸ್ ಬೇಕು ಎಂದು ನಮ್ಮ ಸಚಿವರೊಬ್ಬರು ಅಲ್ಲಿ ಕುಳಿತುಕೊಂಡು ಕೇಳಬಹುದಲ್ಲವೆ? ಈ ದಿಕ್ಕಿನಲ್ಲಿ ನಿಮ್ಮ ಅಧಿಕಾರಿಗಳಲ್ಲಿ ಅವರು ವಿಶ್ವಾಸವನ್ನು ಇಟ್ಟುಕೊಂಡು, ಅಂತಹ ಪ್ರಾಮಾಣಿಕ ಅಧಿಕಾರಿಯನ್ನು ಅಲ್ಲಿಟ್ಟು, ಕಂಟ್ರಾಕ್ಟರ್‌ಗೆ ಬೇಕಾದರೆ ಸಹಕಾರ ಕೊಟ್ಟು ಸುಳ್ಳು ಬಿಲ್ ಮಾಡಿಕೊಳ್ಳುವುದಲ್ಲ, ಸ್ವಾಮಿ ಈ ಬಗ್ಗೆ ನಿಮಗೆ ಗೊತ್ತಿದೆ ಎಂದು ಕಾಣುತ್ತದೆ ಅಲ್ಲಿರುವಂತಹ ಅಧಿಕಾರಿಗಳು ಇವತ್ತು ಭಯಭೀತರಾಗಿದ್ದಾರೆ. ಅಲ್ಲಿರುವಂತಹ ಕೆಲವರು ಪುಢಾರಿಗಳು ಇಷ್ಟು ಬಿಲ್ ಆಗಬೇಕು, ಕೆಲಸ ಆಗಿರಲಿ ಬಿಡಲಿ, ಅವರು ಬಿಲ್ ತೆಗೆದುಕೊಂಡು ಬಂದು ಬಾಗಿಲು ಹಾಕಿ ನಿಂತುಕೊಂಡು ಬಿಲ್‌ಗೆ ಸಹಿ ಮಾಡಿಸಿಕೊಂಡು ದುಡ್ಡು ಡ್ರಾ ಮಾಡಿಕೊಂಡು ಹೋಗುತ್ತಿದ್ದಾರೆ. ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದ್ದೀವೇನು ರೀತಿ ಒಂದು ಗೂಂಡಾಗಿರಿ ಅಲ್ಲಿ ನಡೆಯುತ್ತಿದೆ. ಯಾರೋ ಕೆಲವು ಸಂದರ್ಭದಲ್ಲಿ ಸುಳ್ಳು ಬಿಲ್ಲುಗಳನ್ನು ಮಾಡಿ ಹಣವನ್ನು ಸಹ ತೆಗೆದುಕೊಂಡು ಹೋಗುತ್ತಿರುವಂತಾದ್ದು ನಡೆಯುತ್ತಿದೆ. ನೀವು ಹೋಗಿ ಬನ್ನಿ, ಆ ಭಾಗದಲ್ಲಿ ಇರುವಂತಹ ನಿಮ್ಮ ಶಾಸಕರು ಕೆಲವು ಮಾತನ್ನು ಹೇಳಬಹುದು, ಇದು ಸತ್ಯ ಹೌದೋ ಅಲ್ಲವೋ ಹೇಳಿ. ದಯಮಾಡಿ ಇದಕ್ಕೆ ತಡೆಯನ್ನು ಮಾಡುವಂತಹ ಕೆಲಸ ತಾವು ಮಾಡಬೇಕಾಗುತ್ತದೆ. ಇನ್ನು ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ರೈತಾಪಿ ಜನಕ್ಕೆ ಈ ಒಂದು ಯೋಜನೆಯಲ್ಲಿ ಒಂದೆರಡು ಸಮಸ್ಯೆಗಳಿವೆ. ಯಾವುದು ಎಂದು ಹೇಳಿದರೆ, ಭಾರತ ಸರ್ಕಾರದ ಒಂದು ಅಧೀನ ಸಂಸ್ಥೆಯಾದ ರಾಷ್ಟ್ರೀಯ ಜಲ ವಿಜ್ಞಾನ ಅಭೀಕರಣ ಸಂಸ್ಥೆ, ಈ ಆಲಮಟ್ಟಿ ಮತ್ತು ಪೆನ್ನಾರ್ ಲಿಂಕ್ ಸರ್ವೆ ಕೆಲಸವನ್ನು ಜನವರಿಯಿಂದ ಪ್ರಾರಂಭ ಮಾಡಿದ್ರೆ. ಬಾಗಲಕೋಟೆ ಸಮೀಪ ಈ ಆಲಮಟ್ಟಿ ಅಣೆಕಟ್ಟಿನ ನೀರನ್ನು ಈ ತುಂಗಭದ್ರಾ ನದಿಗೆ ಹೊಸಪೇಟೆ ಬಳಿ ನಿರ್ಮಿಸುತ್ತಿರುವಂತಹ ಅಣೆಕಟ್ಟಿಗೆ ಸಾಗಿಸಿ ಅದರ ಮೂಲಕ ಆಂಧ್ರ ಪ್ರದೇಶದ ಅನಂತಪುರದ ಮಾರ್ಗವಾಗಿ ಪೆನ್ನಾರ್ ನದಿಗೆ ಜೋಡಿಸುವಂತಹ ಸಮೀಕ್ಷೆ ಕೆಲಸ ಇಲ್ಲಿ ನಡೆಯುತ್ತಿದೆ. 1993ರಲ್ಲಿ ಈ ಕೃಷ್ಣ ಪೆನ್ನಾರ್ ಲಿಂಕ್ ಟೋಪೋಷಿಟ್ ವರದಿಗೆ ಸಂಬಂಧಿಸಿದ್ದಂತೆ ರಾಜ್ಯಗಳ ಒಂದು ಅಭಿಪ್ರಾಯವನ್ನು ಕೇಳಲಾಗಿತ್ತು. ಆಂಧ್ರಪ್ರದೇಶ ಮತ್ತು ಕರ್ನಾಟಕ ಯಾವುದೇ ಒಂದು ಅಭಿಪ್ರಾಯ ನೀಡದೇ ಇದ್ದ ಒಂದು ಪರಿಣಾಮ ಇದರ ಬಗ್ಗೆ ದಿನಾಂಕ 16.12.94 ರಂದು ನಡೆದ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯಲ್ಲಿ ನಮ್ಮ ನೀರಾವರಿ ಕಾರ್ಯದರ್ಶಿಗಳು ಹೋಗಿ ಅಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿತ್ತು. ಅದು ಆಗಲಿಲ್ಲ ರಾಜ್ಯ ಸರ್ಕಾರದಿಂದ ಈ ಒಂದು ಕೃಷ್ಣ ಪೆನ್ನರ್ ಲಿಂಕ್ ಯೋಜನೆ ಬಗ್ಗೆ ಸರ್ವೆ ಮಾಡುವುದಕ್ಕೋಸ್ಕರ, ಮತ್ತೆ ಈ ಒಂದು ಕೆಲಸ ಮುಂದುವರೆಸುವ ದೃಷ್ಟಿಯಿಂದ 1.1.95ರಂದು ಈ ಪೆನ್ನಾರ್ ಲಿಂಕ್ ಇನ್‌ವೆಸ್ಟಿಗೇಷನ್‌ಗೆ ಮೋಹನ್ ಕುಮಾರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್, ರಾಮಚಂದ್ರಪ್ಪ ಮತ್ತು ಕೃಷ್ಣಮೂರ್ತಿ ಎನ್ನುವಂತಹ ಜೂನಿಯರ್ ಇಂಜಿನಿಯರ್‌ಗಳನ್ನು ಕಳುಹಿಸಿಕೊಡುತ್ತೇವೆ ಎಂದು ಹೇಳಿ ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲರೂ ಹೇಳಿದ್ದರು, ಬೇರೆ ಸಚಿವರೂ ಹೇಳಿದ್ದರು, ಯಾವುದೇ ಕಾರಣಕ್ಕೆ

ಇದನ್ನು ಮಾಡಲಿಕ್ಕೆ ನಾವು ಅವಕಾಶ ಮಾಡಿ ಕೊಡುವುದಿಲ್ಲ ಎಂದು. ನಮ್ಮ ರಾಜ್ಯದ ನೀರನ್ನು ಆಂಧ್ರಪ್ರದೇಶಕ್ಕೆ ಒಯ್ಯುವಂತಹ ಈ ಒಂದು ಕುತಂತ್ರದ ಕೆಲಸ ಇಲ್ಲಿ ಪ್ರಾರಂಭವಾಗಿದೆ. ನಾನು ಇವತ್ತು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಯಾವ ಕಾರಣಕ್ಕೂ ಸಹ ಈ ಕೃಷ್ಣಾ ಪೆನ್ನಾರ್ ಲಿಂಕ್ ಯೋಜನೆ ಬಗ್ಗೆ ಏನು ಇನ್‌ವೆಸ್ಟಿಗೇಷನ್‌ನಲ್ಲಿ ಕೆಲಸ ಪ್ರಾರಂಭ ಮಾಡಿ ನಮ್ಮ ರಾಜ್ಯದ ಹಿತವನ್ನು ಬಲಿ ಕೊಡುವಂತಹ ಕೆಲಸ ನಡೆಯುತ್ತಿದೆ, ಇದಕ್ಕೆ ಅವಕಾಶವನ್ನು ರಾಜ್ಯ ಸರ್ಕಾರ ಕೊಡಬಾರದು. ಅಲ್ಲಿ ಈ ಒಂದು ಇನ್ ವೆಸ್ಟಿಗೇಷನ್ ಆಗದಂತೆ ತಡೆಯುವ ಕೆಲಸವನ್ನು ಸಹ ಈ ಸರ್ಕಾರ ಈ ಸಮಯದಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ದಿನಾಂಕ 22.1.96ರಲ್ಲಿ ನಾನು ಆಂಧ್ರಪ್ರದೇಶದಲ್ಲಿ ಏನು ಜುರಾಲಾ ಎಂಬ ಒಂದು ಯೋಜನೆ ನಡೆಯುತ್ತಿದೆ, ಆ ಸ್ಥಳಕ್ಕೆ ಭೇಟಿಕೊಟ್ಟು ಬಂದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ದಿನಾಂಕ 21.1.96ರಲ್ಲಿ ಪತ್ರ ಬರೆದಿದ್ದೇನೆ. ಈ ರಾಯಚೂರು ಜಿಲ್ಲೆಯ ಒಂದು ಗಡಿ ಪ್ರದೇಶದ ಸುಮಾರು 559 ಎಕರೆ ಪ್ರದೇಶ ಮುಳುಗಡೆಯಾಗುವುದಿದೆ. 1978ರಲ್ಲಿ ಎಂದು ಕಾಣುತ್ತದೆ, ಕರ್ನಾಟಕ ಮತ್ತು ಆಂಧ್ರಪ್ರದೇಶ ಮಾಡಿಕೊಂಡಂತಹ ಒಪ್ಪಂದದ ಪ್ರಕಾರ ಈ ಒಂದು ಯೋಜನೆ ಇವತ್ತು ಅಲ್ಲಿ ನಡೆಯುತ್ತಿದೆ. ಈ ರಾಜ್ಯಗಳ ಒಪ್ಪಂದವನ್ನೇ ಮೀರಿ ಸುಮಾರು 4 ಮೀಟರ್‌ಗಿಂತ ಹೆಚ್ಚು ಎತ್ತರಕ್ಕೆ ಅದನ್ನು ಕಟ್ಟಿರುವುದರಿಂದ ಅಲ್ಲಿ ಸುಮಾರು 559 ಎಕರೆ ಜಮೀನು ಮುಳುಗಡೆ ಆಗುವಂತಹ ಜಾಗದಲ್ಲಿ ಸುಮಾರು ಒಂದೂವರೆ ಸಾವಿರದಿಂದ ಎರಡು ಸಾವಿರ ಎಕರೆ ಜಮೀನು ಮುಳುಗಡೆಯಾಗುತ್ತಿದೆ. ಪವಿತ್ರವಾದಂತಹ ತೀರ್ಥಕ್ಷೇತ್ರಗಳು ಅಲ್ಲಿ ಮಳುಗಡೆಯಾಗುತ್ತಿವೆ. ಆಂಧ್ರಪ್ರದೇಶ 1.2 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವಂತಹ ಈ ಜುರಾಲಾ ಅಣೆಕಟ್ಟು ದೊಡ್ಡಾಲು ಮತ್ತು ಮೆಹಬೂಬ್‌ನಗರ ಜಿಲ್ಲೆಯಲ್ಲಿ ಕಟ್ಟುತ್ತಿದ್ದು, ಈ ಬಗ್ಗೆ ನಡೆಸಲಾದ ಪೆಂಚ್‌ಮಾರ್ ಸಮೀಕ್ಷೆಯಂತೆ 1.045 ಮೀಟರ್ ಎತ್ತರ ನಿರ್ಮಿಸಿರುವುದರಿಂದ ಕರ್ನಾಟಕ ಹಿತಾಸಕ್ತಿಗೆ ಯಾವುದೇ ಧಕ್ಕೆ ಆಗುವುದಿಲ್ಲ ಎಂದು ಇತ್ತೀಚೆಗೆ ಲೋಕಸಭೆಯಲ್ಲಿ ಜಲ ಸಂಪನ್ಮೂಲ ಖಾತೆ ಸಚಿವರಾದ ಶ್ರೀ ಪಿ.ವಿ. ರಂಗಯ್ಯನಾಯ್ಡು ಅವರು ಹೇಳಿದ್ದಾರೆ. ಅಂದರೆ ನಮ್ಮ ಒಪ್ಪಂದಕ್ಕಿಂತ ಮೂರು ಮೀಟರ್ ಹೆಚ್ಚು ಮಾಡಿದ್ದಾರೆ ಎಂದು ನಾನು ಸ್ಥಳ ತನಿಖೆ ಮಾಡಿ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಬಂದು ನಾನು ಏನು ಹೇಳಿಕೆಯನ್ನು ಕೊಟ್ಟಿದ್ದೆ, ಲೋಕಸಭೆಯಲ್ಲಿ 1.045 ಮೀಟರ್ ಎತ್ತರ ಇರುವುದು ನಿಜ ಎಂದು ಸಂಬಂಧಪಟ್ಟಂತಹ ನೀರಾವರಿ ಸಚಿವರು ಇವತ್ತು ಒಪ್ಪಿಕೊಂಡಿರುತ್ತಾರೆ. ಇವತ್ತು ನಿಮ್ಮನ್ನು ಕೇಳಲಿಕ್ಕೆ ಇಚ್ಛಿಪಡುತ್ತೇನೆ, ಆಂಧ್ರ ಸರ್ಕಾರ ಈ ಕೃಷ್ಣ ನದಿಗೆ ನಿರ್ಮಿಸುತ್ತಿರುವಂತಹ ಈ ಜೂರಾಲಾ ಅಣೆಕಟ್ಟನ್ನು ಎತ್ತರ ನಮ್ಮ ಒಪ್ಪಂದದ ಪ್ರಕಾರ 318.576 ಮೀಟರ್ ಇರಬೇಕು. ಆದರೆ ಅದರ ಬದಲಾಗಿ ಸುಮಾರು 321.510 ಮೀಟರ್ ಎಂದರೆ ಸುಮಾರು 3 ಮೀಟರ್ ಪೆಚ್ಚಿಗೆ ಮಾಡಿದ್ದಾರೆ. ನಮ್ಮ ಅಧಿಕಾರಿಗಳು ಇರಲಿಲ್ಲವೇ? ನಮ್ಮ ಅವರ ಒಪ್ಪಂದ ಆದಮೇಲೆ ಒಂದು ಇಂಚೂ ಸಹ ಎತ್ತರ ಕಟ್ಟುವುದರಿಂದ ನಮ್ಮ ರಾಜ್ಯದ ಜಮೀನು ಮುಳುಗಡೆಯಾಗುತ್ತದೆ, ಇದರಿಂದ ಅನೇಕ ದುಷ್ಪರಿಣಾಮಗಳಾಗುತ್ತವೆ.

ಇದನ್ನು ನೋಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡದೇನೇ, ನಾನು ಬಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಡಿಸ್ಕಸ್ ಮಾಡಿದಾಗ, ನಮ್ಮ ಅಧಿಕಾರಿಗಳನ್ನು ಕಳುಹಿಸಿ ಕೊಡುತ್ತಿದ್ದೇನೆ, ರಾಜ್ಯದ ಮತ್ತು ಆಂಧ್ರದ ಅಧಿಕಾರಿಗಳು ಇಬ್ಬರೂ ಸೇರಿ ಸರ್ವೆ ಮಾಡುತ್ತೇವೆ, ಸತ್ಯ ಸಂಗತಿ ಹೇಳುತ್ತೇವೆ ಎಂದು ಹೇಳಿ ಆರು ತಿಂಗಳು ಆಯಿತು. ಇದುವರೆವಿಗೂ ನಾನು ಹೇಳಿದಂತೆ ಮೂರು ಮೀಟರ್ ಹೆಚ್ಚು ಎತ್ತರವನ್ನು ಕಟ್ಟಿರುವುದು ನಿಜವೋ ಇಲ್ಲವೋ? ಮತ್ತು ಆಂಧ್ರದ ಸರ್ಕಾರ ಒಪ್ಪಂದ ಮಾಡಿಕೊಂಡಂತೆ ಮುಳುಗಡೆಯಾದಂತಹ ಪ್ರದೇಶದ ಜನರಿಗೆ ಪರಿಹಾರ ಕೊಡುವಂತಾದ್ದು ಮತ್ತು ಅಡ್ಡಗೋಡೆಯನ್ನು ಕಟ್ಟುವಂತಾದ್ದು, ಪವಿತ್ರವಾದಂತಹ ನಾರಡಗುಡ್ಡೆ ಮತ್ತು ಇನ್ನೊಂದು ಪವಿತ್ರ ತೀರ್ಥಕ್ಷೇತ್ರ ಮುಳುಗಡೆಯಾಗುತ್ತಿದೆ. ಅದಕ್ಕೆ ಭದ್ರತೆಯನ್ನು ಕೊಟ್ಟು ಅದಕ್ಕೆ ಬೇಕಾದ ಅನುಕೂಲವನ್ನು ಮಾಡಿ ಕೊಡುವ ಬಗ್ಗೆ ಒಪ್ಪಂದ ಆಗಿತ್ತು. ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಆಂಧ್ರದವರು ಹಣ ಕೊಡುವವರೆಗೆ ನಾನು ಚಿಂತೆ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಕೆಲಸವನ್ನು ಪ್ರಾರಂಭ ಮಾಡುತ್ತೇನೆ ಎಂಬ ಮಾತನ್ನು ಹೇಳಿದ್ದರು. ಮುಂದಿನ ವರ್ಷದಿಂದ ನೀರು ನಿಲ್ಲುತ್ತದೆ. ನಮ್ಮ ಹೆಚ್ಚಿನ ಭೂಮಿಗಳು ಮುಳುಗಡೆಯಾಗುತ್ತವೆ. ಮತ್ತೆ ಪವಿತ್ರವಾದಂತಹ ತೀರ್ಥಕ್ಷೇತ್ರ ಮುಳುಗಡೆ ಆಗುವಂತಹ ಸಂದರ್ಭ ಇದ್ದರೂ ಅದನ್ನು ತ್ವರಿತಗತಿಯಲ್ಲಿ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಇದುವರೆವಿಗೂ ಆಗಲಿಲ್ಲ ಮತ್ತು ಮೂರು ಮೀಟರ್ ಎತ್ತರ ಇಡುವ ಬಗ್ಗೆ ಸೂಕ್ತವಾದಂತಹ ಕ್ರಮ ಇಲ್ಲ, ಯಾವ ಅಧಿಕಾರ ಇದಕ್ಕೆ ಬೆಂಬಲವನ್ನು ಕೊಟ್ಟನೋ ಅವನ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ನಿಮ್ಮಿಂದ ಆಗಲಿಲ್ಲ. ಈ ರೀತಿ ನಮ್ಮ ಹಿತವನ್ನು ಸಂಪೂರ್ಣ ನಿರ್ಲಕ್ಷ್ಯಮಾಡಿ, ಪಕ್ಕದ ರಾಜ್ಯಗಳಿಗೆ ಅನುಕೂಲ ಮಾಡಿ ಕೊಡುವಂತಹ ಒಂದು ಪ್ರಯತ್ನ ಇವತ್ತು ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಮಾನ್ಯ ಜೆ.ಹೆಚ್. ಪಟೇಲರು ಹೇಳಿದ್ದರು, 'ಆಂಧ್ರದ ಜುರಾಲಾ ಯೋಜನೆಗೆ ರಾಜ್ಯ ಸಮ್ಮತಿಸಿಲ್ಲ' ಸನ್ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟನೆ ಕೊಟ್ಟರು 'ಜುರಾಲಾ ರಾಜ್ಯದ ಹಿತಕ್ಕೆ ಧಕ್ಕೆ ಇಲ್ಲ'. ಈ ರೀತಿ ಅನೇಕ ಹೇಳಿಕೆಗಳನ್ನು ಕೊಟ್ಟಿರು. ಕೊನೆಗೆ ಲೋಕಸಭೆಯಲ್ಲಿ ಈ ಒಂದು ಎತ್ತರ ಕಟ್ಟಿರುವುದು ಹೌದು ಎಂದು ನೀರಾವರಿ ಸಚಿವರು ಒಪ್ಪಿಕೊಂಡಿರುತ್ತಾರೆ. ಮತ್ತು ಅಲ್ಲಿ ನತ್ತಪೀಠ ಮತ್ತು ನಾಗದಗುಡ್ಡ ಪ್ರದೇಶಗಳಿಗೆ ರಕ್ಷಣೆ ಕೋರಿ ಅಲ್ಲಿನ ಜನ ಹೋರಾಟವನ್ನು ಮಾಡುತ್ತಿದ್ದಾರೆ. ಈ ಎಲ್ಲಾ ದಿಕ್ಕಿನಲ್ಲಿ ಒಂದು ವಿಶೇಷವಾದಂತಹ ಪ್ರಯತ್ನ ಈ ಸರ್ಕಾರದಿಂದ ಆಗಬೇಕಾಗಿತ್ತು. ಈ ದಿಕ್ಕಿನಲ್ಲಿ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಎಂಬುದನ್ನೂ ಸಹ ಸರ್ಕಾರ ತಿಳಿಸಬೇಕು. 1995-96ನೇ ಸಾಲಿನಲ್ಲಿ ಅಂದರೆ ದಿನಾಂಕ 20.2.96ರಂದು ಶ್ರೀಮಾನ್ ಸುರೇಶ್ ಕುಮಾರ್ ಒಂದು ಪ್ರಶ್ನೆಯನ್ನು ಕೇಳಿದ್ದರು. ಕೃಷ್ಣಾ ಜಲ ಭಾಗ್ಯ ನಿಗಮದ ಮೊದಲನೇ ಹಂತದಲ್ಲಿ ಎಷ್ಟು ಹಣವನ್ನು ಸಂಗ್ರಹಿಸಲಾಗಿದೆ? ಎರಡನೇ ಕಂತಿನಲ್ಲಿ ಎಷ್ಟು ಹಣ ಕ್ರೋಢೀಕರಿಸಲು ಉದ್ದೇಶಿಸಲಾಗಿದೆ? ಅದಕ್ಕೆ ಸರ್ಕಾರದವರು ಕೃಷ್ಣಾ ಜಲ ಭಾಗ್ಯ ನಿಗಮ ಮೊದಲನೇ ಹಂತದಲ್ಲಿ 180 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗಿದೆ.

ಎರಡನೇ ಕಂತಿನಲ್ಲಿ 250 ಕೋಟಿ ರೂಪಾಯಿಗಳನ್ನು 1996ರ ಮಾರ್ಚ್ ತಿಂಗಳೊಳಗಾಗಿ ಸಂಗ್ರಹಿಸಲು ಉದ್ದೇಶಿಸಲಾಗಿದೆ ಎಂದು ಉತ್ತರಿಸಿದರು. ಇದುವರೆವಿಗೂ ಸಂಗ್ರಹಿಸಿದ ಹಣದಲ್ಲಿ ಎಷ್ಟು ಹಣ ಕಾಮಗಾರಿಗೆ ಬಿಡುಗಡೆ ಮಾಡಲಾಗಿದೆ? ಇದುವರೆವಿಗೂ ಸಂಗ್ರಹಿಸಿದ ಹಣದಲ್ಲಿ 53.40 ಕೋಟಿ ರೂಪಾಯಿಗಳನ್ನು ವಿವಿಧ ಕಾಮಗಾರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇದೆ ಎಂದು ಸರ್ಕಾರ ಉತ್ತರಿಸಿತ್ತು. ಆ 53.40 ಕೋಟಿ ರೂಪಾಯಿಗಳ ಹಣವನ್ನು ಯಾವ ರೀತಿ ಬಿಡುಗಡೆ ಮಾಡಿದ್ದೀರ ಎಂಬ, ಬಗ್ಗೆ ವಿವರವನ್ನು ದಿನಾಂಕ 20.2.96 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದರು. ನಿಮ್ಮ ಪ್ರಕಾರವೇ ದಿನಾಂಕ 20.2.96 ರವರೆಗೆ 180 ಕೋಟಿ ರೂಪಾಯಿಗಳನ್ನು ಕೃಷ್ಣಾ ಜಲ ಭಾಗ್ಯ ನಿಗಮದಿಂದ ವಸೂಲು ಮಾಡಿದ್ದರೂ ಸಹ ಫೆಬ್ರವರಿ ಕೊನೆಯವರೆಗೆ ಸಹ ನೀವು ಹಣವನ್ನು ನೀವು ಬಿಡುಗಡೆ ಮಾಡಿಲ್ಲ. 180 ಕೋಟಿ ರೂಪಾಯಿಗಳನ್ನೂ ಖರ್ಚು ಮಾಡಲಿಲ್ಲ ಎಂಬುದು ನಿಮ್ಮ ಉತ್ತರದಿಂದ ಸ್ಪಷ್ಟವಾಗುತ್ತದೆ. ಬಹಳ ಅಬ್ಬಬ್ಬಾ ಎಂದರೆ ಈ ಒಂದು ತಿಂಗಳಲ್ಲಿ ನೀವು ಎಷ್ಟು ಕೋಟಿ ಖರ್ಚು ಮಾಡುತ್ತೀರಿ? ಪ್ರತಿ ದಿವಸಕ್ಕೆ 5 ಕೋಟಿ ರೂಪಾಯಿಗಳಯಂತೆ ನೀವು ಖರ್ಚು ಮಾಡಿದರೂ ಸಹ 20-25 ಕೆಲಸಗಳು ನಡೆದರೆ 80 ಕೋಟಿ ಆಗುವುದಿಲ್ಲ, 90 ಕೋಟಿ ಆಗುವುದಿಲ್ಲ, 100 ಕೋಟಿ ರೂಪಾಯಿಗಳಾಗುವುದಿಲ್ಲ. ಅಂದರೆ ನೀವೇನು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ, ಅದು ನಿಮ್ಮಿಂದ ಆಗಲಿಲ್ಲ. ಯಾವ ಹಣವನ್ನು ಈ ಉದ್ದೇಶಕ್ಕೋಸ್ಕರ ಸಂಗ್ರಹ ಮಾಡಿದ್ದೀರೋ ಆ ಹಣವನ್ನು ಸಹ ಪೂರ್ಣ ಖರ್ಚು ಮಾಡುವುದಕ್ಕೆ ಆಗದಿರುವಂತಹ ಒಂದು ಜವಾಬ್ದಾರಿಯೂ ಇಲ್ಲದ ರೈತ ವಿರೋಧಿ ಸರ್ಕಾರ ಇವತ್ತು ಅಸ್ತಿತ್ವದಲ್ಲಿದೆ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ದಯಮಾಡಿ ನಾವು ಎಲ್ಲಾ ರೀತಿಯ ಸಹಕಾರವನ್ನು ಇದಕ್ಕಾಗಿ ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಈ ಒಂದು ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣ ಮಾಡಲಿಕ್ಕೋಸ್ಕರ ನಾವು ಸಹಕಾರ ಕೊಡಲು ಸಿದ್ಧರಾಗಿದ್ದೇವೆ. ಅನಗತ್ಯ ಕಾಮಗಾರಿ ಕೆಲಸ ಕಾರ್ಯಗಳನ್ನು ತಾವು ಬದಿಗೊತ್ತಿ ಇದಕ್ಕೆ ಒಂದು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಪ್ರತಿ ವರ್ಷ ಈ ವರ್ಷದಿಂದಲೇ 1996-97ನೇ ಸಾಲಿನಿಂದ ಕನಿಷ್ಟ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ನೇರವಾಗಿ ಕಾಮಗಾರಿ ಕೆಲಸಕ್ಕೆ, ಎಸ್ಟಾಬ್ಲಿಷ್ ಮೆಂಟ್ ಬಿಟ್ಟು, ಖರ್ಚು ಮಾಡುವುದಕ್ಕೆ ನೀವು ಏನಾದರೂ ಪ್ರಯತ್ನ ಮಾಡಿದರೆ ಎರಡು ಸಾವಿರ ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಪೂರ್ಣ ಬಳಸಿಕೊಳ್ಳುವುದಕ್ಕೆ ಸಾಧ್ಯವಿದೆ. ಆ ದಿಕ್ಕಿನಲ್ಲಿ ನೀರು ವಿಶೇಷವಾದಂತಹ ಪ್ರಯತ್ನ ಮಾಡಿದ್ದೇ ಈ ನಾಡಿನ ಜನ ನಿಮಗೆ ಶಾಪ ಹಾಕುತ್ತಾರೆ. ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲ ಆ ಒಂದು ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುತ್ತಾ, ನಾವು 11ನೇ ತಾರೀಖು ನಿಶ್ಚಯ ಮಾಡಿದ್ದೇವೆ, ಈ ಸರ್ಕಾರಕ್ಕೆ ರಾಜ್ಯದ ರೈತರ ಭಾವನೆಗಳು ಏನಿದೆ ಅದನ್ನು ವ್ಯಕ್ತಪಡಿಸಬೇಕೆಂದ ಹೇಳಿ ಆ ಭಾಗದ ಸಾವಿರಾರು ಸಂಖ್ಯೆಯಲ್ಲಿ ನಮ್ಮ ರೈತರು ಕಬ್ಬನ್ ಪಾರ್ಕ್‌ಗೆ ಬಂದ

ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕೆಂದು ನಿಶ್ಚಯ ಮಾಡಿದ್ದೇವೆ. ಈಗಲಾದರೂ ತಾವು ಜಾಗೃತರಾಗಿ, 11ನೇ ತಾರೀಖಿಗೆ ಬೇಕಾದರೆ ಸ್ವಲ್ಪ ಕುಡಿಯುವ ನೀರು ವ್ಯವಸ್ಥೆ ಮಾಡಿ. ರೈತರು ಅಲ್ಲಿಂದ ಬರುತ್ತಿದ್ದಾರೆ. ಲಕ್ಷಾಂತರ ರೈತರು 11ನೇ ತಾರೀಖು ಬರುತ್ತಿದ್ದಾರೆ. ಈ ಕಬ್ಬಿನ ಸಮಸ್ಯೆ ಬಗ್ಗೆ ಮತ್ತು ಕೃಷ್ಣಾ ಜಲಾನಯನ ಪ್ರದೇಶದ ಕೆಲಸ ಪೂರ್ಣ ಆಗಿಲ್ಲವೆಂದು ಬರುವಂತಹ ರೈತರನ್ನು ಕಂಡು ಅವರಿಗೆ ಸರಿಯಾದಂತಹ ಒಂದು ಆಶ್ವಾಸನೆಯನ್ನು ಕೊಡುವಂತಹ ಒಂದು ಪ್ರಯತ್ನವನ್ನಾದರೂ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಸಭೆಯಲ್ಲಿ ಮಾಡಿದರೆ ಬಹುಶಃ ಅವರು ಶಾಂತ ರೀತಿಯಿಂದ ವಾಪಸ್ಸು ಹೋಗಬಹುದು.

5.30 ಪಿ.ಎಂ.

ಆ ನಿಮ್ಮ ಕಾಮಗಾರಿಯಲ್ಲಿ ಯಾವ ರೀತಿಯಲ್ಲಿ ಕೆಲಸ ಮಾಡುತ್ತೀರಿ, ಯೋಜನೆ ಪೂರ್ಣ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡುತ್ತೀರಿ ಅದು ತಮಗೆ ಬಿಟ್ಟಿದ್ದುದು. ಆದರೆ ಒಂದು ಮಾತು ಹೇಳುತ್ತೇನೆ, ಇದೇ ರೀತಿಯಲ್ಲಿ ಭರವಸೆ ಕೊಟ್ಟು ಸಾವಿರ ಕೋಟಿ ಬಿಡುಗಡೆ ಮಾಡುತ್ತೇವೆಂದು ಹೇಳಿ 450 ಕೋಟಿ ರೂಪಾಯಿ ಖರ್ಚು ಮಾಡಿ ಮುಂದೆ ಮಾಡುತ್ತೇವೆಂದು ಹೇಳಿ ಡಂಗುರ ಸಾರಿಸಿಕೊಂಡು ಹೋಗುವುದನ್ನು ರಾಜ್ಯದ ಜನ ಸಹಿಸುವುದಿಲ್ಲ. ಜನ ಬೀದಿಗೆ ಇಳಿಯುವಂತಹ ಕಾಲ ಸನ್ನಿಹಿತವಾಗುತ್ತಿದೆ. ಬಹಳ ಆ ಕ್ರೋಶಗೊಂಡಿರುವಂತಹ ವಾತಾವರಣವಿದೆ. ಅದಕ್ಕೆ ಅವಕಾಶ ಕೊಡಬೇಡಿ. ಮಾತು ಎತ್ತಿದರೆ ಮುಖ್ಯ ಮಂತ್ರಿಗಳು ಹೇಳುತ್ತಾರೆ ಬಹುಶಃ ನಿಮ್ಮ ಬಾಯಿಯಿಂದ ನಾನು ಕೇಳಲಿಲ್ಲ. ನೀವು ಹೇಳಬಹುದು, ಇವತ್ತಲ್ಲ ನಾಳೆ ಬಿಡಿ ಯಡಿಯೂರಪ್ಪನವರೇ ಜನ ಓಟು ಕೊಟ್ಟಿದ್ದಾರೆ ಎಲ್ಲಿಯವರೆಗೆ ಇರುತ್ತೇವೆ ಅಲ್ಲಿಯವರೆಗೆ ಇರುತ್ತೇವೆ. ನಾವು ಪುರಸಭೆಗಳಲ್ಲಿ ಗೆದಿದ್ದೇವೆ ಎಂಬ ಮಾತನ್ನು ತಾವು ಹೇಳಬಹುದು. ಆದ್ದರಿಂದ ಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ನೀವು ಮಾಡಿರುವಂತಹ ಎಲ್ಲಾ ಅನ್ಯಾಯಕ್ಕೆ ಅವರು ಅಸ್ತು ಎಂದರು ಆಶೀರ್ವಾದ ಮಾಡಿದರು ಎನ್ನುವ ಭಾವನೆ ಬೇಡ. ಯಾವುದೋ ಒಂದು ಕಾರಣಕ್ಕೆ ಯಾವುದೋ ಒಂದು ಸಂದರ್ಭದಲ್ಲಿ ಚುನಾವಣೆಯಲ್ಲಿ ಗೆದ್ದರೆ ಅದು ನೀವು ಮಾಡಿದಂತಹ ಎಲ್ಲ ಜನ ವಿರೋಧಿ ನೀತಿಗೆ ಸರ್ಟಿಫಿಕೇಟ್ ಕೊಟ್ಟರು ಎಂದು ಭಾವಿಸಿದರೆ ಅದು ನಿಮ್ಮ ಭ್ರಮೆ ಆಗುತ್ತದೆ. ನೀವು ಸಹ ಆ ಒಂದು ಗೊಂದಲದಲ್ಲಿ ಸಿಕ್ಕಿಕೊಳ್ಳದೆ ಜನಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಕೊನೆ ಪಕ್ಷ ಯಾವ ಮಣ್ಣಿನ ಮಕ್ಕಳು ಸ್ವಾತಂತ್ರ್ಯ ಬಂದು 48 ವರ್ಷಗಳಲ್ಲಿ ಹಗಲಿರುಳು ದುಡಿದ ಮೇಲೂ ಸಹ ಬಿಕ್ಷುಕರಂತೆ ಕಾಣಿಸುವಂತಹ ಒಂದು ದುಸ್ಥಿತಿ ಬಂದಿದೆ, ಇದಕ್ಕೆ ಪರಿಹಾರ ಹುಡುಕುವಂತಹ ಒಂದು ಪ್ರಯತ್ನ, ಈ ಯೋಜನೆ ಪೂರ್ಣ ಮಾಡುವುದಕ್ಕೆ ಅಗತ್ಯವಿರುವಂತಹ 1,500 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡುವಂತಹ ದೃಢ ನಿಲುವನ್ನು ಪ್ರಕಟಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಸಂದರ್ಭದಲ್ಲಿ ನಾಲ್ಕು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಉಪಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ

ಧನ್ಯವಾದಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಸಮಾಧಾನದಿಂದ ಈ ಎಲ್ಲಾ ವಿಚಾರಗಳನ್ನು ಸಹಿತ ಹೇಳಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. 11ನೇ ತಾರೀಖು ಕಬ್ಬಿನ ಸಮಸ್ಯೆ, ಕೃಷ್ಣಾ ಸಮಸ್ಯೆ ಇವೆಲ್ಲಾ ರೈತರ ಪ್ರತಿಭಟನೆಯನ್ನು ನಾವು ನಮ್ಮ ಪಕ್ಷದ ಆಶ್ರಯದಲ್ಲಿ ಮಾಡುತ್ತಿದ್ದೇವೆ, ಅನ್ನುವ ಮಾತನ್ನು ಹೇಳಿದರು. ನಾವು ಏನೋ ಇದೆಲ್ಲಾ ಮಾಡುತ್ತಾ ಇರತಕ್ಕಥಾದ್ದು ಲೋಕಸಭಾ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಅದರಲ್ಲಿ ಏನೂ ಸಂಶಯವಿಲ್ಲ. ನಾವು ಏನು ಸನ್ಯಾಸಿಗಳಲ್ಲ, ನಮಗೆ ಅಧಿಕಾರ ಬೇಕು, ಲೋಕಸಭಾ ಚುನಾವಣೆಯಲ್ಲಿ ನಾವು ಗೆಲ್ಲಬೇಕು. ಅದಕ್ಕೆ ನಾವು ಇದೆಲ್ಲಾ ಮಾಡುತ್ತಿದ್ದೇವೆ. ನಾನಂತೂ ಓಪನ್ನಾಗಿ ಹೇಳುತ್ತಿದ್ದೇನೆ ಹೌದು ನಾವು ಮಾಡುತ್ತಿದ್ದೇವೆ. ಅಕ್ರಮವಾಗಿ ಏನೂ ಮಾಡುತ್ತಿಲ್ಲ. ನೀವೂ ಲೋಕಸಭಾ ಚುನಾವಣೆಗೆ ಅಲ್ಲವೇ ಇದನ್ನು ಮಾಡುತ್ತಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಸತ್ಯ ಹೇಳಿದಿರಿ, ನಾಳೆ ವಿಧಾನ ಸಭಾ ಚುನಾವಣೆಯಲ್ಲಿ ಇವರು ಬೇಡ ಎಂದು ಹೇಳಿ ನಾವು ಗೆಲ್ಲುವುದಿಲ್ಲ ಎಂದು ವಿಶ್ವಾಸ ಇಟ್ಟು ಅವರಿಗೆ ಓಟು ಕೊಟ್ಟರಿ, 15 ತಿಂಗಳಾಯಿತು, ಕೃಷ್ಣಾರ್ಪಣೆ ಮಾಡಿಬಿಟ್ಟರು. ಅಭಿವೃದ್ಧಿ ಕಾರ್ಯಗಳು ಸ್ಥಗಿತ ಆಗಿವೆ. ಲೋಕಸಭೆ ಚುನಾವಣೆಯಲ್ಲಿ ದೊಡ್ಡ ದೊಡ್ಡವರನ್ನು ಕರೆದುಕೊಂಡು ಬಂದು ದೊಡ್ಡ ದೊಡ್ಡ ಮಾತುಗಳನ್ನು ಹೇಳಿ ಟೋಪಿ ಹಾಕುವವರಿದ್ದಾರೆ, ನಿಮಗೆ ಇದೆಲ್ಲಾ ರೀತಿಯಲ್ಲಿ ಅನ್ಯಾಯಗಳು ಆಗಿವೆ, ಹುಷಾರಾಗಿರಿ ಲೋಕಸಭೆ ಚುನಾವಣೆಯಲ್ಲಿ ಇವರನ್ನು ಮನೆಗೆ ಕಳುಹಿಸಿ 10-12 ಸೀಟು ಗೆದ್ದು ಬಿಟ್ಟರೆ ಮತ್ತೆ ಅಧಿಕಾರ ಮದದಿಂದ ಮತ್ತೆ ನಮ್ಮನ್ನು ಪೂರ್ಣವಾಗಿ ನಿರ್ನಾಮ ಮಾಡುತ್ತಾರೆ. ನೆಲದಲ್ಲಿ ತುಳಿದುಬಿಡಬಹುದು. ಅದಕ್ಕೆ ಎಚ್ಚರಿಕೆ ವಹಿಸಿ ಎನ್ನುವಂತಹ ಎಚ್ಚರಿಕೆ ಮತ್ತು ನಾಡಿನ ಜನ ಇದನ್ನು ಸಹಿಸುವುದಿಲ್ಲ ಎನ್ನುವ ಪ್ರತಿಭಟನೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು ಮಾಡಿ ಸಂತೋಷ. ನಾವು ಹೋದಾಗ ನಮ್ಮ ರೈತರು ಅಲ್ಲಿ ಸೇರುತ್ತಾರೆ, ಸಾವಿರಾರು, ಲಕ್ಷಾಂತರ ಜನ ರೈತರು ಸೇರುತ್ತಾರೆ. ಅವರು ರೈತರು ಅಲ್ಲವಾ? ಹಾಗೆ ನೀವೂ ಲೋಕಸಭಾ ಚುನಾವಣೆ ಇಟ್ಟುಕೊಂಡೇ ಮಾಡುತ್ತಾ ಇರುವುದರಿಂದ ನಾವು ಲೋಕಸಭಾ ಚುನಾವಣೆ ಇಟ್ಟುಕೊಂಡೇ ಮಾಡುತ್ತಿರುವುದು ಅವರು ಜನತಾದಳದ ರೈತರು, ಬಿ.ಜೆ.ಪಿ. ರೈತರು.

ಶ್ರೀ ಬಿ. ಯಡಿಯೂರಪ್ಪ : ನಾವು ದುರುಪಯೋಗ ಮಾಡಿಕೊಳ್ಳುವುದಿಲ್ಲ. ಹೆಲಿಕ್ಯಾಪ್ಟರ್ ತೆಗೆದುಕೊಂಡು ಹೋಗಿ ದುರುಪಯೋಗ ಮಾಡಿಕೊಳ್ಳುವುದಿಲ್ಲ. ಆರ್.ಟಿ.ಒ ಕರೆದು ಲಾರಿ ನಿಲ್ಲಿಸಿ ಅವನ ಲೈಸೆನ್ಸ್ ಹಿಡಿದುಕೊಂಡು ಅದನ್ನೆಲ್ಲಾ ತೆಗೆದುಕೊಂಡು ಹೋಗಿ ಡಂಪ್ ಮಾಡಿ ಬಂದು ಆ ಮೇಲೆ ಲೈಸನ್ಸ ತೆಗೆದುಕೊಂಡು ಹೋಗಿ ಎಂದು ಆರ್.ಟಿ.ಒ. ಕೈಯಲ್ಲಿ

ಹೇಳಿಸುವುದಿಲ್ಲ. ಅಧಿಕಾರ ದುರುಪಯೋಗ ಮಾಡಿಕೊಳ್ಳುವುದಿಲ್ಲ. ಆ ಕೆಲಸ ನೀವು ಮಾಡುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಡಿಯೂರಪ್ಪನವರೇ, ಅಧಿಕಾರ ದುರುಪಯೋಗದ ಪ್ರಶ್ನೆ ಬರುತ್ತಾ ಇರತಕ್ಕಂಥದ್ದು ಲೋಕಸಭಾ ಚುನಾವಣೆ ಘೋಷಣೆ ಆದ ಮೇಲೆ. ಇನ್ನೂ ಲೋಕಸಭೆ ಚುನಾವಣೆ ಘೋಷಣೆಯೇ ಆಗಿಲ್ಲ. ಘೋಷಣೆ ಆದ ಮೇಲೆ ಸರ್ಕಾರದ ಆಡಳಿತ ಯಂತ್ರವನ್ನು ಉಪಯೋಗಿಸಿಕೊಂಡರೆ ನೀವು ಆಪಾದನೆ ಮಾಡಿ. ನಾವೆಲ್ಲ ಇಲ್ಲಿ ಹೇಳುತ್ತಾ ಇರತಕ್ಕಂಥದ್ದು ಲೋಕಸಭಾ ಚುನಾವಣೆಗೋಸ್ಕರ. ಹಾಗಾದರೆ ಬಡ್ಜೆಟ್‌ನ್ನು ನಾವು ಮಂಡಿಸಬಾರದಾಗಿತ್ತೇ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಗೃಹ ಸಚಿವರು ಇಬ್ಬರೂ ಸೇರಿ ಕೃಷ್ಣ ನೀರು ಡೆಲ್ಲಿ ಕಡೆ ಓಡಿಸುತ್ತಿದ್ದಾರೆ. ಅದಕ್ಕಾಗಿ ನಮ್ಮ ಸಮಸ್ಯೆ ಏನಿದೆ ಎಂದರೆ ಗಂಗಾ ಇಲ್ಲಿ ಬಂದು ಕಾವೇರಿಗೆ ಸೇರಬೇಕೆಂದು ಇದೆ. ಆದರೆ ಇವರು ಆ ಕಡೆಗೆ ಒಯ್ಯಬೇಕು ಎಂದು ಮಾಡತ್ತಿದ್ದಾರೆ. ಅದಕ್ಕೆ ಬೇಡ ಎಂದು ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಯಡಿಯೂರಪ್ಪನವರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡುವಾಗ ಅವರದೇ ಧಾಟಿಯಲ್ಲಿ ಹಿಂದಿನ ಸರ್ಕಾರ ಕೂಡ ಏನು ಮಾಡಿತ್ತು, ಏಕೆ ಸುಮ್ಮನೆ ಇದ್ದರು, ಇಲ್ಲಿಯವರೆಗೆ ಏನು ಮಾಡಿಲ್ಲ, ಈಗ ಏಕೆ ಕೇಳುತ್ತಿದ್ದಾರೆ ಅನ್ನತಕ್ಕಂತಹ ಅಪ್ರತ್ಯಕ್ಷವಾಗಿ ನಮ್ಮ ಬಗ್ಗೆ, ನಮ್ಮ ಪಕ್ಷದ ಬಗ್ಗೆ ಸ್ವಲ್ಪ ಹೇಳಿದರು. ಆದರೆ ಆ ಅಂಕಿ ಸಂಖ್ಯೆ ಅವರಲ್ಲಿರಬಹುದು. ಅಂದರೆ ಹಿಂದೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪ್ರಾರಂಭವಾಗಬೇಕಾದರೆ ಯಾರು ಕಾರಣಕರ್ತರು, ಎಷ್ಟರ ಮಟ್ಟಿಗೆ ಈ 20 ವರ್ಷಗಳಲ್ಲಿ ಇದಕ್ಕೆ ಅವಕಾಶ ಸಿಕ್ಕಿತು, ನಾರಾಯಣಪುರ ಡ್ಯಾಂ ಯಾವಾಗ ಕಂಪ್ಲೀಟ್ ಆಯಿತು, ಅಪ್ಪರ್ ಕೃಷ್ಣ ನೀರಾವರಿ ಯೋಜನೆಗೆ ನಮ್ಮ ಅಂಕಿ ಸಂಖ್ಯೆ ಪ್ರಕಾರ 50 ಪರ್ಸೆಂಟ್ ಈಗ ಮುಗಿದಿದೆ. ಇನ್ನು 50 ಪರ್ಸೆಂಟಗೆ ಆಗತಕ್ಕಂಥದ್ದು ಇದೆ. ಅದಕ್ಕೆ ಹಣ ಎಷ್ಟೇ ಖರ್ಚಾಗಿರಬಹುದು. ನೀವು ಹಿಂದೆ ಬರೀ ಮೂರುಸಾವಿರ ಕೋಟಿ ರೂಪಾಯಿ ಖರ್ಚಾಗಿತ್ತು, ಈಗ ನಾವು ಸದನ ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಅಂದರೆ ಈಗಿರತಕ್ಕಂತಹ ಸಿಮೆಂಟ್ ಧಾರಣೆ ಏನು 1972ರಲ್ಲಿ ಇದ್ದಂತಹ ಒಂದು ಚೀಲದ ಸಿಮೆಂಟ್ ಧಾರಣೆ ಏನು, ಈಗಿರತಕ್ಕಂತಹ ಪರ್ ಮೆಟ್ರಿಕ್ ಟನ್ ಕಬ್ಬಿಣದ ಧಾರಣೆ ಏನು ಆಗಿನದು ಏನು, ಇವೆಲ್ಲಾ ಲೆಕ್ಕ ಹಾಕಬೇಕಾಗುತ್ತದೆ. ನಾವು ಎಷ್ಟು ಹಣ ಖರ್ಚುಮಾಡುತ್ತೇವೆ ಎನ್ನುವುದಕ್ಕಿಂತಲೂ ನಮ್ಮ ಫಿಸಿಕಲ್ ಅಚೀವ್‌ಮೆಂಟ್ ಏನು ಇತ್ತು, ನಮ್ಮ ಗುರಿ ಏನು ಆ ಹಣದಲ್ಲಿ ನಾವು ಕೆಲಸ ಎಷ್ಟು ಟರ್ನ್‌ಓವರ್ ಮಾಡಿದ್ದೇವೆ ಅನ್ನತಕ್ಕಂತಹದ್ದು ಬಹಳ ಮುಖ್ಯ. ಇರಬಹುದು, ನಾವು ಹೇಳಿದಷ್ಟು 100ಕ್ಕೆ 100 ಸಾಧನೆ ಆಗದೆ ಇರಬಹುದು, ಆದರೆ ನಾವು ಯಾವಾಗಲೂ 100 ಹೇಳಿ ಒಂದು ಮಾಡಿದವರಲ್ಲ, 100ಕ್ಕೆ 70 ಪರ್ಸೆಂಟ್ ಮಾಡಿರಬಹುದು,

80 ಪರ್ಸೆಂಟ್ ಮಾಡಿರಬಹುದು. ಆದರೆ ಇಲ್ಲಿ ಏನಾಗಿದೆ ಅಂದರೆ ಪರಿಸ್ಥಿತಿ ವ್ಯತ್ಯಾಸವಾಗುತ್ತಿದೆ. ಈ ಎರಡು ಸಾವಿರ ಇಸವಿ ಒಳಗೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ನೀರನ್ನು ಅಥವಾ ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕಂತಹ ನೀರನ್ನು ಯಾವ ರೀತಿಯಾಗಿ ನಾವು ಬಳಕೆ ಮಾಡಿಕೊಳ್ಳಬಹುದು, ನಮಗೆ ಅಲಾಟ್ ಆದಂತಹ 734 ಟಿ.ಎಮ್.ಸಿ. ಯಲ್ಲಿ ಐದು ಟಿ.ಎಂ.ಸಿ. ನೀರನ್ನು ಮದ್ರಾಸಗೆ ನಾವು ಡ್ರಿಂಕಿಂಗ್ ವಾಟರಗೆ ಕೊಟ್ಟಿದ್ದೇವೆ. ಅದು ಬಿಟ್ಟರೆ ಉಳಿಗ 729 ಟಿ.ಎಂ.ಸಿ ನೀರನ್ನು ಯಾವ ರೀತಿಯಾಗಿ ಮತ್ತು ಹೇಗೆ ನಾವು ಉಪಯೋಗ ಮಾಡಿಕೊಳ್ಳಬಹುದು, ಅದು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಇರಬಹುದು, ಘಟಪ್ರಭ ಪ್ರಾಜೆಕ್ಟ್ ಇರಬಹುದು, ಮಲಪ್ರಭ ಇರಬಹುದು, ಕಾರಂಜ ಪ್ರಾಜೆಕ್ಟ್ ಇರಬಹುದು, ಹಿಪ್ಪರಗಿ ಬ್ಯಾರೇಜ್ ಇರಬಹುದು ಅಪ್ಪರ್ ತುಂಗ ಪ್ರಾಜೆಕ್ಟ್ ಇರಬಹುದು ಈ ರೀತಿ ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕಂತಹ ಯಾವುದೇ ಪ್ರಾಜೆಕ್ಟ್ ಇರಬಹುದು, ಅದಕ್ಕೆ ಹಣ ಹೇಗೆ ಸಂಗ್ರಹಣೆ ಮಾಡುವುದು ಮತ್ತು ಆದ್ಯತೆ ಹೇಗೆ ಕೊಡುವುದು ಒಂದು ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಇಲ್ಲ ಈ ಕಡೆ ಇರತಕ್ಕಂತಹ ಕಾವೇರಿ ಬೇಸಿನ್ ಪ್ರಾಜೆಕ್ಟ್ ನಲ್ಲಿ ಏನು ಬಹಳ ಒಗ್ಗಟ್ಟಿನಿಂದ ನಾವೆಲ್ಲರೂ ಪ್ರಯತ್ನ ಮಾಡಿದ್ದೇವೆ ಅದು ಯಾವ ರೀತಿಯಾಗಿ ಆಯಿತು, ಆ ಕಡೆ ಏಕೆ ಆಗಲಿಲ್ಲ ಎಂದು. ಆದರೆ ಅವರಿಗೆ ಗೊತ್ತಿರಬಹುದು, ಈ ಕಾವೇರಿ ಬೇಸಿನನಲ್ಲಿ ಇರತಕ್ಕಂತಹ ಪ್ರಾಜೆಕ್ಟ್ ಎಲ್ಲಾ ಕೂಡ ನಾನ್ ಪ್ಲಾನ್‌ನಲ್ಲಿ ಇದೆ, ಪ್ಲಾನ್‌ನಲ್ಲಿ ಒಂದೂ ಇಲ್ಲ. ನಾನ್ ಪ್ಲಾನ್‌ನಲ್ಲಿ ಅದಕ್ಕೆ ಹಣವನ್ನು ಖರ್ಚು ಮಾಡತಕ್ಕಂಥದ್ದು ಏಕೆ ಆಯಿತು ಅಂದರೆ ತಮಿಳುನಾಡಿನವರು ನಮ್ಮ ನೀರಿಗೆ ನಾಳೆ ಗಂಟು ಬೀಳುತ್ತಾರೆ, ನೀರನ್ನು ಕೇಳುತ್ತಾರೆ, ನಾವು ಅದನ್ನು ಉಪಯೋಗ ಮಾಡದೇ ಹೋದರೆ 1942ರ ಅಗ್ರಿಮೆಂಟ್ ಪ್ರಕಾರ ಅದು ಪ್ರಿಸಿಡೆಂಟಾಗಿ ಅವರಿಗೆ ಉಳಿಯುತ್ತದೆ ಎಂದು ಹೇಳಿ, ನಾನ್ ಪ್ಲ್ಯಾನ್‌ನಲ್ಲಿ ಸಾಕಷ್ಟು ಹಣವನ್ನು ರಾಜ್ಯದ ಬೊಕ್ಕಸದಿಂದ ಬರತಕ್ಕಂತಹ ಹಣವನ್ನು ಅದಕ್ಕೆ ಖರ್ಚು ಮಾಡಲಾಯಿತು. ಯಾರು ಮಾಡಿದ್ದು ಎಂದರೆ, ಆಗ ಶ್ರೀಮಾನ್ ವೀರೇಂದ್ರ ಪಾಟೀಲರು, ಶ್ರೀಮಾನ್ ದೇವರಾಜ ಅರಸರವರು, ಅವರೂ ಕಾಂಗ್ರೆಸ್‌ನವರೇ ಇದೆಲ್ಲ ಅವರ ಕಾಲದಲ್ಲಿ ಪ್ರಾರಂಭವಾಗಿದ್ದುದು, ಅವರ ಕಾಲದಲ್ಲಿ ಕಟ್ಟಿದ್ದುದು. ಇದನ್ನು ನಾವು ಸ್ವಲ್ಪ ನೆನಪಿಟ್ಟುಕೊಳ್ಳಬೇಕು. ಸುಮ್ಮನೆ ದೂರಬೇಕು ಏನ್ನತಕ್ಕಂತಹ ದೃಷ್ಟಿಯಿಂದ ದೂರತಕ್ಕಂಥಾದ್ದು ಅಥವಾ ಹೇಳಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಹೇಳಿದರೆ ಅಷ್ಟು ಸರಿಯಲ್ಲ. ಆದರೆ ಇವತ್ತಿನ ಪ್ರಶ್ನೆ ಅದಲ್ಲ. ನೀವು ಹೇಳಿದ್ದುದು ಏನೆಂದರೆ ಏನೇ ಕಷ್ಟ ಬರಲಿ, ಏನೇ ತೊಂದರೆ ಬರಲಿ, ನಾವು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ, ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡದೇ ಹೋದರೆ ಒಂದು ಕ್ಷಣವೂ ಈ ಸ್ಥಳದಲ್ಲಿ ನಾನು ಇರುವುದಿಲ್ಲ ಎನ್ನತಕ್ಕಂತಹ ಮಾತನ್ನು ಒಂದು ಸಲ ಇಲ್ಲ ಪದೇ ಪದೇ ತಾವು ಹೇಳಿದಿರಿ. ರಾಯಚೂರಿಗೆ ಬಂದಾಗ ಹೇಳಿದಿರಿ, ಗುಲ್ಬರ್ಗಾಕ್ಕೆ ಬಂದಾಗ ಹೇಳಿದಿರಿ, ಭೀಮರಾಯನಗುಡಿಗೆ ಬಂದಾಗ ಹೇಳಿದಿರಿ, ಬಾಗಲಕೋಟೆಗೆ ಬಂದಾಗ ಹೇಳಿದಿರಿ. ಬಿಜಾಪುರದಲ್ಲಿ ರಿಪೀಟ್ ಮಾಡಿದಿರಿ

ಮತ್ತು ಮೈಸೂರಿನಲ್ಲಿ ರಿಪೀಟ್ ಮಾಡಿದಿರಿ. ಹೇಳದೇ ಇರತಕ್ಕಂತಹ ಊರು ಇಲ್ಲ. ಯಾವ ಊರಿಗೆ ಹೋಗಿರಲಿ ಆ ಊರಿನಲ್ಲಿ ಮೊದಲು ಹೇಳುವುದು ಇದೇ. ಒಂದು ಯು.ಕೆ.ಪಿ.ಯನ್ನು ನಾನು ಎರಡು ಸಾವಿರ ಇಸವಿಯೊಳಗೆ ಮುಗಿಸುತ್ತೇನೆ, ಈ ಸಾರಿ ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ನೀವು ಹೇಳಿದ್ದು. ಯಾರು ನಿಮಗೆ ಅರ್ಜಿ ಕೊಟ್ಟು ಹಠ ಹಿಡಿದು ಒಂದು ಸಾವಿರ ಕೋಟಿ ಆನೌನ್ಸ್ ಮಾಡಿ ಎಂದು ಹೇಳಿರಲಿಲ್ಲ. ಆದರೆ ನೀವು ಗುರಿ ಇಟ್ಟುಕೊಂಡಿರಿ. ನೀವು ಗುರಿ ಇಟ್ಟುಕೊಂಡಿದ್ದನ್ನು ಸಾಧಿಸತಕ್ಕಂಥ ಸಾಧ್ಯತೆ ಇದ್ದರೆ ನೀವು ಗುರಿ ಇಟ್ಟುಕೊಳ್ಳಬೇಕು. ಸಾಧಿಸತಕ್ಕಂಥ ಸಾಧ್ಯತೆ ಇಲ್ಲದಿದ್ದಾಗ ತೊರಿಕೆಗೊಸ್ಕರ ಒಂದು ದೊಡ್ಡ ಫಿಗರ್‌ನ್ನು ತೋರಿಸಿ, ಓ ಏನಪ್ಪ ದೇವೇಗೌಡರು ಬಂದ ಮೇಲೆ, ಜನತಾದಳ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾವಿರ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತಿದ್ದಾರೆ. ಹಿಂದಿನ ಏನೂ ಮಾಡಿಲ್ಲ ಏನ್ನತಕ್ಕಂಥ ಒಂದು ಇಂಪ್ರೆಷನ್ ಕೊಡುವುದಕ್ಕೋಸ್ಕರ ಅಥವಾ ಜನರಲ್ಲಿ ತಿಳುವಳಿಕೆ ಹೇಳುವುಕ್ಕೋಸ್ಕರ ಮಾಡಿದ್ದರೆ ಅದು ಖಂಡಿತ ತಪ್ಪು. ಇದರಿಂದ ನಿಮಗೇ ಕೆಟ್ಟ ಹೆಸರು ಬರುತ್ತದೆ. ಕೊನೆಗೆ ಎರಡು ತಿಂಗಳ ಹಿಂದೆ ಪುನಃ ತಾವು ಛೇಮರಾಯನಗುದಿಗೆ ಹೋದಾಗ, ಬಾಗಲಕೋಟೆಗೆ ರಿವೈಸ್ ಮಾಡಿದಿರಿ, ಏನೆಂದರೆ, ಆರುನೂರು ಕೋಟಿ ರೂಪಾಯಿ ಮಾರ್ಚ್ ಎಂಡ್‌ಗೆ ಖರ್ಚು ಮಾಡುತ್ತೇವೆ ಮತ್ತು ಉಳಿದಂಥ ನಾಲ್ಕು ನೂರು ಕೋಟಿ ರೂಪಾಯಿಗಳನ್ನು ಜೂನ್ ಒಳಗಾಗಿ ಖರ್ಚು ಮಾಡುತ್ತೇವೆ ಎಂದು. ಇದು 1995-96ಕ್ಕೆ ಇರತಕ್ಕಂಥ ಟಾರ್ಗೆಟ್. ಅಂದರೆ 1995-96ಕ್ಕೆ ಇರತಕ್ಕಂಥ ಸಾವಿರ ಕೋಟಿ ಟಾರ್ಗೆಟ್ ಅದು ಏನು ಇದೆ? ಅದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ? ಅಂದರೆ ಅದರ ಅರ್ಥ ಏನು ಎಂದರೆ ನೀವು 1996-97, 1995-96 ಇವು ಎರಡೂ ವರ್ಷದ್ದು ಎರಡು ಸಾವಿರ ಕೋಟಿ ಎಂದು ಹೇಳಿದಹಾಗೆ ಆಗುತ್ತದೆ. ಏಕೆಂದರೆ ಜೂನ್ ಒಳಗೆ ಖರ್ಚು ಮಾಡಬೇಕೆಂದರೆ ಇದು ಈ ವರ್ಷದ ಬಡ್ಜೆಟ್ ವರ್ಷವಾಯಿತು. ಏಪ್ರಿಲ್ನಿಂದ ಜೂನವರೆಗೆ ಅಂದರೆ 1996-97 ಆಯಿತು. ಅಂದರೆ ಎಷ್ಟರ ಮಟ್ಟಿಗೆ ನೀವು ಜನರಿಗೆ ಸುಳ್ಳು ಹೇಳತಕ್ಕಂಥದ್ದು, ಮೋಸ ಮಾಡತಕ್ಕಂಥದ್ದು ಮಾಡಿದಿರಿ ಎಂದು ಇದರಿಂದ ಗೊತ್ತಾಗುತ್ತದೆ. ಈಗ ಇದಾಯಿತು. ಅದಕ್ಕೆ 600 ಕೋಟಿ ಬಂದರು ಕೊನೆಗೆ ರಿವ್ಯೂ ಮಾಡಿದಾಗ ತಮ್ಮ ಹತ್ತಿರ ಕೂಡ ಅಂಕಿ ಸಂಖ್ಯೆ ಇರಬಹುದು ಜನವರಿ ಕೊನೆವರೆಗೆ ಇವರು ಖರ್ಚು ಮಾಡಿದ್ದುದು ಮುನ್ನೂರು ಕೋಟಿ ಎಪ್ಪತ್ತೆಂಟು ಲಕ್ಷ. ಅಂದರೆ ಆರನೂರಕ್ಕೂ ಕೂಡ ರೀಚ್ ಆಗಲಿಲ್ಲ. ಅಂದರೆ ಮೊದಲನೆಯದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದ್ದುದು ಸತ್ಯಕ್ಕೆ ದೂರವಾದ ಮಾತು. ಎರಡನೆಯದು 600 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಮಾತನಾಡಿದ್ದುದು. ಇವೊತ್ತು ನೋಡಿದರೆ ಇನ್ನೂ ಸ್ವಲ್ಪ ಹೆಚ್ಚು ಕಡಿಮೆ 375 ಕೋಟಿಗೆ ಇದ್ದೀರಿ. ಈ ಮಾತನ್ನು ನಾನೇ ಅಲ್ಲ, ಇವೊತ್ತು ಮುಂಜಾನೆ ನಿಮ್ಮ ಫೈನಾನ್ಸ್ ಮಿನಿಸ್ಟರ್ ಕೂಡ ನಿಮ್ಮ ಡಿಟೇಲ್ಸ್ ಎಕ್ಸ್‌ಪೆಂಡಿಚರ್ ಪ್ರಾವಿಜನನಲ್ಲಿ ಹೇಳಿದರು. ಒಟ್ಟಾರೆ ಈ ಕೃಷ್ಣಾ ಬೇಸಿನ್‌ಗೆ ಎಷ್ಟು ಹಣ ಇಟ್ಟಿದ್ದುದು ಎಂದು ನಮಗೆ

ತಿಳಿಯುತ್ತಿಲ್ಲ. ಏಕೆಂದರೆ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ 300 ಕೋಟಿ ರೂಪಾಯಿಯನ್ನು ನಾನು ಸಂಗ್ರಹಣೆ ಮಾಡುತ್ತೇನೆಂದು ಹೇಳಿ ಬಡ್ಜೆಟ್‌ನಲ್ಲಿಟ್ಟು, ಮುಖ್ಯಮಂತ್ರಿಗಳು 800 ಕೋಟಿ ರೂಪಾಯಿ ನಾವು ಮಾಡುತ್ತೇವೆಂದು ಹೇಳಿದರು. ಅದು ಸ್ವಲ್ಪ ವ್ಯತ್ಯಾಸವಾಗಿದೆ ಎಂದು ಅವರು ಸ್ವಲ್ಪ ತಿದ್ದಿಕೊಂಡು 600 ಕೋಟಿ ಎಂದು ಅದನ್ನು ನಾವು ಮಾಡುತ್ತೇವೆಂದರು. ಆದರೆ ಬಡ್ಜೆಟ್‌ನಲ್ಲಿ 300 ಕೋಟಿ ಎಂದು ಪ್ರಾವಿಜನ್ ಇಟ್ಟುಕೊಂಡು 180 ಕೋಟಿ ಮಾತ್ರ ನೀವು ಕಲೆಕ್ಟ್ ಮಾಡಿದ್ದೀರಿ. ಇದು ನಿಮ್ಮದೇ ಅಂಕಿ ಸಂಖ್ಯೆ. ನೀವು ಯಾವುದು ಅಂಕಿ ಸಂಖ್ಯೆ ಕೊಡುತ್ತೀರೋ ಅದನ್ನು ನಾವು ನಂಬೋಣವೋ? ಈ ಸದನದಲ್ಲಿ ಕೊಟ್ಟಂಥ ಅಂಕಿ ಸಂಖ್ಯೆಗಳನ್ನು ನಾವು ನಂಬೋಣವೋ ಅಥವಾ ಹೊರಗಡೆ ನೀವು ಭಾಷಣ ಮಾಡತಕ್ಕಂಥ ಕಾಲದಲ್ಲಿ ಹೇಳಿದ ಅಂಕಿ ಸಂಖ್ಯೆಗಳನ್ನು ನಾವು ನಂಬೋಣವೋ? ನೀವೇ ಹೇಳಿ. ಇದಕ್ಕೆ ಏನೂ ಬೆಲೆ ಇಲ್ಲ ಎಂದರೆ ಇದನ್ನು ಹೇಳಬೇಡಿ. ಆದರೆ ನಾವೆಲ್ಲರೂ ಬೆಲೆ ಕೊಡತಕ್ಕಂಥದ್ದು, ಈ ಸದನದಲ್ಲಿ ನಾವು ಏನು ಓಟ್ ಮಾಡುತ್ತೇವೆ, ಏನು ಚಾರ್ಜ್ಡ್ ಅಮೌಂಟ್ ಇರುತ್ತದೆ. ಅದು ಮಾತ್ರ ಸತ್ಯವೇ ಹೊರತಾಗಿ, ಹೊರಗಡೆ ನಾವು ಏನು ಹೇಳಿದರೂ ಕೂಡ ಸತ್ಯ ಅಲ್ಲ. ಅದು ಪುನಃ ಇಲ್ಲಿಗೆ ಬರಬೇಕು, ಇಷ್ಟು ಖರ್ಚಾಗಿದೆ ಅಥವಾ ಜಾಸ್ತಿ ಖರ್ಚು ಮಾಡಿದರೆ ಅಪ್ರೋಪ್ರಿಯೇಶನ್ ಮಾಡಿಕೊಂಡು, ನೀವು ಹೇಳಬಹುದು ಹೆಚ್ಚಿನ ಹಣ ನಾವು ಪುನಃ ಖರ್ಚು ಮಾಡಿದ್ದೇವೆಂದು ಹೇಳಿ ಪುನಃ ಬಿಲ್ ತಂದು ಅದನ್ನು ಮಾಡಿಕೊಡಬೇಕಾಗುತ್ತದೆ. ಹೀಗೆ ನೀವು ಇವೊತ್ತಿನ ದಿವಸ ಸಾವಿರ ಕೋಟಿ ಹೇಳತಕ್ಕಂಥವರು ಇದರಲ್ಲಿಯೂ ಕೂಡ ವಿಫಲರಾಗಿದ್ದೀರಿ. ಈ ಹಣ ಖರ್ಚು ಮಾಡುತ್ತಿಲ್ಲ. ಇದರಿಂದ ನಿಮ್ಮ ಪೊಟೆನಶಿಯಲಿಟಿ, ಅಂದರೆ ಇರಿಗೇಶನ್ ಪೊಟೆನ್‌ಶಿಯಾಲಿಟಿ ಕ್ರಿಯೇಟ್ ಮಾಡತಕ್ಕಂಥದ್ದು ಕೂಡ ತಾವು ಹೇಳಿದಿರಿ, ಹೆಚ್ಚು ಕಡಿಮೆ ಸುಮಾರು 50 ಸಾವಿರಕ್ಕಿಂತ ಹೆಚ್ಚಿನ ಗುರಿಯನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದಿರಿ. ಆದರೆ ಇವೊತ್ತು ನೋಡಿದರೆ ಅದು 20 ಸಾವಿರಕ್ಕೂ ಮುಟ್ಟಲಿಲ್ಲ. ಅಂದರೆ ಫಿಜಿಕಲ್ ಟಾರ್ಗೆಟ್ ರೀಚ್ ಆಗಲಿಲ್ಲ. ಇಷ್ಟಕ್ಕೆ ಸಾಕಾಗದೇ ಇನ್ನೊಂದು ಹೇಳಿದಿರಿ ಮುಂದಿನ ವರ್ಷ ಕೂಡ ನಾನು ಸಾವಿರ ಕೋಟಿ ರೂಪಾಯಿಯನ್ನೇ ಕೊಡುತ್ತೇನೆಂದು ಹೇಳಿದಿರಿ. ಒಂದು ಕಡೆ ಹೇಳೋದು ಈ ಉಳಿದಂಥ ಹಣ ಖರ್ಚು ಮಾಡುತ್ತೇನೆಂದು ಹೇಳೋದು, ಇನ್ನೊಂದು ಕಡೆ ಹೇಳೋದು ಇನ್ನೂ ಸಾವಿರ ಕೋಟಿ ಕೊಡುತ್ತೇನೆಂದು ಪುನಃ ಈ ವರ್ಷದ ಬಡ್ಜೆಟನಲ್ಲಿ ಏನು ಹೇಳಿದಿರಿ ತಾವು ಅಂದರೆ ಸಾವಿರ ಕೋಟಿ ಖರ್ಚು ಮಾಡತಕ್ಕದ್ದು ಹಾಗೂ ಈ ವರ್ಷ್ ಬಡ್ಜೆಟ್ಟಿನಲ್ಲಿ ಇಟ್ಟಿದ್ದು 250 ಕೋಟಿಯೇ ಅಂದರೆ 50 ಕೋಟಿ ಮಾತ್ರ ಜಾಸ್ತಿ. ಹೋದ ವರ್ಷ 200 ಕೋಟಿ ಈ ವರ್ಷ 50 ಕೋಟಿ, ಉಳಿದಂಥದ್ದು ಎಲ್ಲಾವು ಈ ಕನ್ನಡಿಯಲ್ಲಿ ಗಂಟು ಕಟ್ಟಿ ಇಟ್ಟಿದ್ದೇನೆ ಇದು ನೋಡಿ ಇದು ಯು.ಕೆ.ಪಿ.ಗೆ ಖರ್ಚು ಆಗತಕ್ಕಂಥದ್ದು. ಏಕೆಂದರೆ ಇದರಿಂದ ಸಾಬೀತಾಗಿದೆ. ಇಷ್ಟೇ ಅಲ್ಲ, ಇಂದು ಬೆಳಿಗ್ಗೆ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯನವರೇ ಒಪ್ಪಿಕೊಂಡರು ನಿಮ್ಮ ಪ್ಲ್ಯಾನ್ ಏಕ್ಸ್‌ಪೆಂಡಿಚರ್‌ನಲ್ಲಿ 650 ಕೋಟಿ ರೂಪಾಯಿ ಮಾಡುವುದಕ್ಕಾಗಲಿಲ್ಲ ಏಕೆಂದರೆ ಹಣ ಸಂಗ್ರಹಣೆ ಮಾಡುವುದಕ್ಕಾಗಲಿಲ್ಲ ಅದಕ್ಕೆ

ಅವರು ಕಾರಣ ಏನು ಹೇಳಿದರು ಎಂದರೆ ಕರ್ನಾಟಕ ಪವರ್ ಕಾರ್ಪೋರೇಶನ್‌ನಿಂದ ಲೋನ್ ಬರಬೇಕಾಗಿತ್ತು ಬರಲಿಲ್ಲ. ಕೆ.ಇ.ಬಿ.ಯಿಂದ ಬರಬೇಕಾಗಿತ್ತು ಬರಲಿಲ್ಲ. ಕೆ.ಎಸ್.ಆರ್.ಟಿ.ಸಿನವರು ಮೊಜಿಲೈಸ್ ಮಾಡಬೇಕಾಗಿತ್ತು ಮಾಡಲಿಲ್ಲ, ಎಕ್ಸೈಸ್‌ನಲ್ಲಿ 50 ಕೋಟಿ ಕಡಿಮೆ ಬಂತು ಅದೂ ಆಗಲಿಲ್ಲ. ಅಂದರೆ ಯಾವುದು ಬರುತ್ತದೆಂದು ನಂಬಿಕೆ ಇಟ್ಟುಕೊಂಡು ಅಥವಾ ಅಸಂಷ್ಷನ್ ಮೇಲೆ ನಮ್ಮ ಬಜೆಟ್ ಪ್ರಾವಿಜನ್ ಮಾಡುತ್ತೀರಿ, ಉಳಿದ ಕಡೆ ಡೆಫಿನೇಟ್ ಪ್ರಾವಿಜನ್ ಮಾಡಿಕೊಂಡು ನೀವು ಅನುಕೂಲ ಮಾಡಿಕೊಳ್ಳುತ್ತೀರಿ? ನಾನು ಅದನ್ನು ಕೇಳುತ್ತೇನೆ. ನಿಮಗೆ ಬೇಕಾದಲ್ಲಿ 300 ಕೋಟಿ ಡೆಫಿನೇಟ್ ಪ್ರಾವಿಜನ್, ಉಳಿದಂಥ ಕಡೆ 250 ಕೋಟಿ ಇಟ್ಟು, ಉಳಿದಿರತಕ್ಕಂಥದ್ದನ್ನು ನಾನು ಸಂಗ್ರಹಣೆ ಮಾಡುತ್ತೇನೆ ಜಲಭಾಗ್ಯ ನಿಗಮದಿಂದ, ಸೆಂಟ್ರಲ್ ಗವ್ರ್ನಮೆಂಟಿನಿಂದ ಅಥವಾ ಫೈನಾನ್ಷಿಯಲ್ ಇನ್ಸ್‌ಟಿಟ್ಯೂಟ್‌ನಿಂದ ನಾನು ಲೋನ್ ತರುತ್ತೇನೆ ಅದು ಮಾಡುತ್ತೇನೆಂದು ಹೇಳಿ ಜನರಿಗೆ ಏಕೆ ಮೋಸ ಮಾಡುತ್ತೀರಿ? ಆಗಲ್ಲ ಎಂದು ಹೇಳಿ. 250 ಕೋಟಿಯಲ್ಲಿ ಇನ್ನೂ 50 ಕೋಟಿ, ನಾವು 300 ಕೋಟಿನೇ ಖರ್ಚು ಮಾಡೋಣ, ರೀಯಲಿಸ್ಟಿಕ್ ನಮ್ಮ ಬಜೆಟ್ ಇದೆ ನಾವು ಯಾವ ರೀತಿ ತಪ್ಪು ದಾರಿಗೆ ಎಳೆಯುವುದಿಲ್ಲ ಏನ್ನತಕ್ಕಂಥದ್ದು ಹೇಳಿ, ಆದರೆ ಇವೊತ್ತಿನ ದಿವಸ ಆ ವಿಷಯ ಹೇಳುವುದಕ್ಕೂ ಕೂಡ ನೀವು ತಯಾರಿಲ್ಲ. ಇನ್ನೊಂದು ಹೇಳಿದಿರಿ, ನಮ್ಮ ವೀರಪ್ಪ ಮೊಯಿಲಿಯವರು ಇದ್ದಂಥ ಕಾಲಕ್ಕೆ ನಾರಾಯಣಪುರಕ್ಕೆ ಟೋಕನ್ನಾಗಿ ಐದು ಕೋಟಿ ಪ್ರಾವಿಜನ್ ಮಾಡಿದ್ದರು. ತದ ನಂತರ ಮೂರು ಸಾರಿ ಫಂಕ್ಷನ್ ಆಯಿತು. ಒಂದು ಸಾರಿ ಭೂಮಿ ಪೂಜೆ, ಒಂದು ಸಾರಿ ಸಮ್ಮೇಳನ ಆಯಿತು. ಆದರೆ ಆ ಕಾಲುವೆಯನ್ನು ಕಂಪ್ಲೀಟ್ ಮಾಡುವುದಕ್ಕೆ ತಾವು ಎಷ್ಟು ಹಣ ಕೊಟ್ಟಿದ್ದೀರಿ? ಮತ್ತೆ ಅದಕ್ಕೂ ಕೂಡ ನಿಗಮ ತೋರಿಸಿದ್ದೀರಿ. ಅಂದರೆ ನಿಗಮ ನಾಳೆ ಕಲೆಕ್ಟ್ ಮಾಡಿದರೆ ಮಾಡಬಹುದು ಇಲ್ಲದಿದ್ದರೆ ಇಲ್ಲ. It depends on the market. ಅಥವಾ ನಿಮ್ಮ ಮೇಲೆ ನಂಬಿಕೆ ಇಟ್ಟು ಅಷ್ಟು ಹಣ ಜನ ಕೊಡಬೇಕಲ್ಲ. ಅವರು ಕೊಡಲಿಲ್ಲವೆಂದು ಬೇರೆ ದಾರಿಯೇ ಇಲ್ಲ, 250 ಅಥವಾ 300 ಕೋಟಿಗೆ ನೀವು ರೆಸ್ಟ್ರಿಕ್ಟ್ ಆಗಬೇಕು. ಇವೊತ್ತು ಅರುನೂರು ಕೋಟಿ ಎಂದವರು 300-350 ಕೋಟಿ ಏನು ತಾವು ತಲುಪಿಸಿದ್ದೀರಿ ಅದೇ ರೀತಿಯಾಗಿ ತಾವು ನಿಲ್ಲಬೇಕಾಗುತ್ತದೆ.

ಇನ್ನು ಎರಡನೆಯದಾಗಿ ಆಲಮಟ್ಟಿ ಜಲಾಶಯವನ್ನು 524 ಮೀಟರಗೆ ಎತ್ತರ ಮಾಡಬೇಕೆಂದು ನಿರ್ಣವಾಗಿದೆ. ಆ ನಿರ್ಣಯವನ್ನು ನಾವು ಜಾರಿಯಲ್ಲಿ ತರಬೇಕಾದರೆ ನೂರಾರು ಹಳ್ಳಿಗಳು ಅಲ್ಲೇನು ಮುಳುಗಡೆಯಾಗುತ್ತದೆ ಅವರೆಗೆ ರೀ ಹ್ಯಾಬಿಲಿಟೇಶನ್ ಮಾಡಬೇಕು. ಅದನ್ನು ರೀ ಹ್ಯಾಬಿಲಿಟೇಶನ್ ಮಾಡಬೇಕಾದರೆ ಅದಕ್ಕೆ ಸ್ವತಂತ್ರವಾಗಿ ಒಬ್ಬ ಅಧಿಕಾರಿಯನ್ನು ತಾವು ನೇಮಿಸಿದ್ದೀರಿ. ಅವರು ಅಲ್ಲಿದ್ದಾರೆ. ಅವರು ಇತ್ತೀಚೆಗೆ ಆ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲಿಗೆ ಒಂದು ತಿಂಗಳಾಯಿತು ಆದರೆ ಹಿಂದೆ ಅಲ್ಲಿ ಕೆಲಸ ನಡೆದಿಲ್ಲ ಎಂದು ನಮ್ಮ ವಿಷಯ ಸಮಿತಿಯವರು ನಾವು ಕೂಡ ಆ ಕಡೆ ಎಲ್ಲಾ ನೋಡಿಕೊಂಡು ಬಂದಿದ್ದೇವೆ. ಈಗ ಒಂದು ವರ್ಷವಾದ ಮೇಲೆ, ಅವರಿಗೆ ಅಧಿಕಾರ ಕೊಟ್ಟಿದ್ದಕ್ಕಾಗಿ ಅಲ್ಲಿ ಕೆಲಸ ಇವೊತ್ತು

ಚಾಲನೆಯಲ್ಲಿದೆ. ಆದರೆ ನಾವು ಅದನ್ನು ಕಂಪ್ಲೀಟ್ ಮಾಡಬೇಕೆಂದರೆ ವಾರಪುಟಿಂಗ್‌ನಲ್ಲಿ ಕೆಲಸ ಮಾಡಬೇಕು. ಇದು ವಾರ್‌ಪುಟಿಂಗ್ ಕೆಲಸ ಮಾಡಬೇಕು ಎಂದರೆ ಹಣವೂ ಅಷ್ಟೇ ಜಾಗೃತಿಯಿಂದ ಬಿಡುಗಡೆ ಮಾಡಬೇಕು. ಇವೊತ್ತು ಆ ಹಣವನ್ನು ಕೂಡ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಬಿಡುಗಡೆ ಮಾಡಲಿಲ್ಲ. ಸುಮ್ಮನೆ ಎಷ್ಟು ಕೇಳಿದಷ್ಟು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಮಟ್ಟದಲ್ಲಿ ಅಧ್ಯಕ್ಷರೇ ತಮ್ಮ ಗಮನಕ್ಕೆ ತರುತ್ತೇನೆ, ಆಂಧ್ರ ಮುಖ್ಯಮಂತ್ರಿಗಳು, ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏನೆಂದು ಹೇಳಿಕೆ ಕೊಟ್ಟಿದ್ದಾರೆಂದರೆ,

``The Andhra Pradesh Chief Minister Mr. N.Chandrababu Naidu has said that he will approach the Supreme Court if necessary to resolve the issue of the construction of Almatti Dam by the Karnataka Government designed to store and utilise more water than what was allotted under the Award."

ಅಂದರೆ ನಾವು ಈಗ ಸುಮಾರು 524 ಮೀಟರ್ ಎಂದು ಇರಲಿ, ಇನ್ನೂ 509ಕ್ಕೂ ಕೂಡ ಕಂಪ್ಲೀಟ್ ಆಗಿಲ್ಲ. ಈ ಮಧ್ಯೆದಲ್ಲಿಯೇ ಅವರು ಎಲ್ಲಿಯವರೆಗೆ ಹೋಗಿ ಹೇಳಿದ್ದಾರೆಂದರೆ ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ, ಅವರು ಒಂದಲ್ಲ ಒಂದು ಕಾರಣದಿಂದ ಇದನ್ನು ಅವಾಯಡ್ ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಅವಾಯ್ಡ್ ಎಂದರೆ ಇದರಲ್ಲಿ ರಾಜಕೀಯ ಅವಾಯ್ಡೋ ಅಥವಾ ಜೆನ್ಯೂನ್ ಆಸಕ್ತಿ ಇಟ್ಟುಕೊಂಡು ಇದನ್ನು ಅಲಮಟ್ಟಿ ಬಗ್ಗೆಯೇ ಕೇಳುತ್ತಿದ್ದಾರೋ ಏನೋ ಎಂಬ ಬಗ್ಗೆ ನಮಗೆ ಯಾವುದೂ ಕೂಡ ಸ್ಪಷ್ಟವಾಗಿಲ್ಲ. ಆದರೆ ಮೊನ್ನೆ ಕ್ಲಾರಿಫಿಕೇಶನ್ ಮಾನ್ಯಮುಖ್ಯಮಂತ್ರಿಗಳು ದಿನಾಂಕ 05-03-96 ಉತ್ತರ ಕೊಡುತ್ತಿದ್ದ

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕಾಲದಲ್ಲಿ, ಈ ವಿಷಯದಲ್ಲಿ ಯಾರು ಏನೇ ಹೇಳಲಿ, ಯಾರು ಏನೇ ಮಾಡಲಿ 1997ರ ಡಿಸೆಂಬರ್ ಒಳಗಾಗಿ ಆ ನೀರನ್ನು ನಿಲ್ಲಿಸುತೇವೆ ಹೊರತು ಒಂದೊಂದು ತೊಟ್ಟು ನೀರನ್ನೂ ಕೂಡ ಬಿಡುವುದಿಲ್ಲ, it is my challenge ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಈ ರೀತಿಯ ಚಾಲೆಂಜ್ ತೆಗೆದುಕೊಂಡ ಮೇಲೆ ಈ ನಿಟ್ಟಿನಲ್ಲಿ ಸರ್ಕಾರ ಪ್ರತಿ ತಿಂಗಳು ಟಾರ್ಗೆಟ್ ಇಟ್ಟುಕೊಂಡು ಈ ಕಾರ್ಯಕ್ಕಾಗಿ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಒಂದು ಸಾವಿರ ಕೋಟಿ ಎಂದರೆ ಏಪ್ರಿಲ್ ತಿಂಗಳಲ್ಲಿ ಎಷ್ಟು ಖರ್ಚು ಮಾಡುತ್ತೀರಿ, ಯಾವ ಯಾವ ಕೆಲಸ ಮಾಡಿದರೆ ಮಾತ್ರ ಮುಖ್ಯಮಂತ್ರಿಗಳು ವಚನವನ್ನು ಏನು ಕೊಟ್ಟಿದ್ದಾರೆ ಅದನ್ನು ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದು ಪುನಃ ಕನ್ನಡಿ ಗಂಟು ಆಗುತ್ತದೆ. ಪುನಃ ನಾವು ಹೇಳಿದ್ದೇ ಹೇಳಬೇಕು, ನೀವು ಕೇಳಿದ್ದೇ ಕೇಳಬೇಕು. ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ 2000 ಇಸವಿಯೊಳಗೆ ಕೃಷ್ಣಾ ಮೇಲ್ದಂಡೆ ಯೋಜನೆ 'ಬಿ' ಸ್ಕೀಮ್

ಬಚಾವತ್ ಆಯೋಗದ ಪ್ರಕಾರ ಪ್ರಾರಂಭವಾಗುತ್ತದೆ. ಬಚಾವತ್ ಆಯೋಗದ ಪ್ರಕಾರ 2000 ಇಸವಿಯೊಳಗೆ ಅಲೊಕೇಟ್ ಮಾಡಿದ ನೀರನ್ನು ನೀವು ಯುಟಿಲೈಸ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆಂದರೆ ಇದಕ್ಕಾಗಿ ನಾವು ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದಿದ್ದಾರೆ, ಈಗಾಗಲೇ ಅವರು ತೆಲುಗು ಗಂಗಾ ಯೋಜನೆ ನಡೆಸಿದ್ದಾರೆ. ಬೇರೆ ಬೇರೆ ಕುಡಿಯುವ ನೀರನ್ನು ಪಡೆಯುವುದಕ್ಕೋಸ್ಕರವಲ್ಲದೇ 'ಜುರಾಲ' ಪ್ರಾಜೆಕ್ಟನಲ್ಲಿ ಈಗಾಗಲೇ 3 ಅಡಿ ಎತ್ತರಿಸಿ ನೀರನ್ನು ಹೆಚ್ಚಿಗೆ ಸಂಗ್ರಹ ಮಾಡಿಕೊಂಡಿದ್ದಾರೆ. ಹೀಗೆ ಅವರು ಅನೇಕ ರೀತಿಯಿಂದ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅದಲ್ಲದೆ ಅನೇಕ ಲಿಫ್ಟ್ ಇರಿಗೇಶನ್ ಕಾರ್ಯಕ್ರಮವನ್ನು ಕೂಡ ಅವರು ತರುತ್ತಿದ್ದಾರೆ. ಈ ಪರಿಸ್ಥಿತಿ ಇರುವಾಗ....

ಅಧ್ಯಕ್ಷರು : ಖರ್ಗೆಯವರೇ, ಈಗ ಇದನ್ನು ಕ್ಲೋಸ್ ಮಾಡಿ ಸೋಮವಾರ ಇದನ್ನು ಇದರ ಮೇಲೆ ಮುಂದುವರೆಸೋಣ, ಏಕೆಂದರೆ ಸೋಮವಾರ ಹೇಗಿದ್ದರೂ ಸೇರಬೇಕಾಗುತ್ತದೆ, ಏಕೆಂದರೆ, ಇದರ ಹೆಚ್ಚು ಮಾತನಾಡುವುದಿದೆಯೆಂದು ಕಾಣುತ್ತದೆ. ಈಗ 6 ಗಂಟೆಗೆ ಕ್ಯಾಬಿನೆಟ್ ಮೀಟಿಂಗನ್ನು ಇಟ್ಟುಕೊಂಡಿದ್ದಾರಂತೆ. ಮಂತ್ರಿಗಳನ್ನು ಬಿಡುಗಡೆ ಮಾಡಬೇಕು, 6 ಗಂಟೆಯೊಳಗೆ ಮುಗಿಯುತ್ತದೆ ತಾನೇ ನಿಮ್ಮ ಭಾಷಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರೆ ಸೋಮವಾರವೆಂದು ಸರಿಯಾಗಿ ನಿಶ್ಚಯವಾಗಬೇಕು.

ಅಧ್ಯಕ್ಷರು : ಅದಕ್ಕೋಸ್ಕರವೇ ನಾನು ಇದು ಆತುರಾತುರವಾಗಿ ಆಗಬಾರದು ಎನ್ನುವ ದೃಷ್ಟಿಯಿಂದಲೇ ಈಗ ನಾನು ಇಲ್ಲಿ ಉಪಾಧ್ಯಕ್ಷರನ್ನು ಕೂರಿಸಿ ನಾನು ಹೊರಗಡೆ ಇದ್ದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳ ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆ ಕುಳಿತು ಮಾತನಾಡಿದೆ. ಸೋಮವಾರ ಮಧ್ಯಾಹ್ನ 2 ಗಂಟೆಯ ಮೇಲೆ ಅವರು ಉತ್ತರ ಕೊಡುತ್ತಾರೆ. ಆದಕಾರಣ ಅವೊತ್ತು 2 ಗಂಟೆಯವರೆಗೆ ಇದನ್ನು ಚರ್ಚೆ ಮಾಡಬಹುದು. ಇದಲ್ಲದೇ 2 ಬಿಲ್ಲಗಳು ಇವೆ, ಅದನ್ನೂ ಕೂಡ ನಾವು ಲಿಸ್ಟ್ ಔಟ್ ಮಾಡಿಕೊಳ್ಳಬಹುದು. We can continue the discussion. ಅಥವಾ ನೀವು ಇವೊತ್ತು 6 ಗಂಟೆಯೊಳಗೆ ಮುಗಿಸುತ್ತೇನೆ ಎಂದರೆ ಬೇಕಾದರೆ ನೀವು ಕಂಟಿನ್ಯೂ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಇಲ್ಲ.

MR. SPEAKER : I do not want to curtail your discussion. ಹಾಗಾದರೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರೋಣವಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಿನ್ನೆ ನಾವು 10-30ರವರೆಗೂ ಕುಳಿತಿದ್ದೆವು, ತಾವು ಇವೊತ್ತು 7 ಗಂಟೆಯವರೆಗೂ ಅವಕಾಶ ಕೊಟ್ಟರೆ, ಅಷ್ಟರಲ್ಲಿ ರವೀಂದ್ರನಾಥ ಮತ್ತು ಇನ್ನೊಬ್ಬರು ಇದರ ಬಗ್ಗೆ ಮಾತನಾಡುವವರಿದ್ದಾರೆ, ಸೋಮವಾರ

ನಾವು ಮತ್ತೆ ಸದನದಲ್ಲಿ ಕುಳಿತುಕೊಳ್ಳುವುದರಿಂದ ಅನೇಕ ಪ್ರಮುಖಾದಂಥ ವಿಚಾರಗಳನ್ನು ಶೂನ್ಯವೇಳೆಯಲ್ಲಿ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಇವೊತ್ತು 7 ಗಂಟೆಯವರೆಗೂ ಕುಳಿತುಕೊಳ್ಳೋಣ. ನಾವು ರೆಡಿ ಇದ್ದೇವೆ.

ಅಧ್ಯಕ್ಷರು : ಸೋಮವಾರ ಶೂನ್ಯ ವೇಳೆ ಮತ್ತಿತರವುಗಳನ್ನು ಇಟ್ಟುಕೊಳ್ಳುವುದಿಲ್ಲ. ಈಗೇನಾಗಿದೆಯೆಂದರೆ ಕ್ಯಾಬಿನೇಟ್ ಮೀಟಿಂಗ್ ಇಟ್ಟುಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಯಾರೂ ಇರುವುದೇ ಇಲ್ಲವಲ್ಲಾ ಇದುವರೆಗೂ ನಾವು ಅವರನ್ನು ಕೇಳಿದಿವೆ, ಈಗ ಕೃಷ್ಣಾ ಬಗ್ಗೆ ಚರ್ಚೆಯಾಗಬೇಕಾದರೆ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ನಾವು ಅದರ ಬಗ್ಗೆ ಚಿಂತನೆ ಮಾಡಬೇಡವೆ?

ಅಧ್ಯಕ್ಷರು : ಮುಖ್ಯಮಂತ್ರಿಗಳ ಪ್ರತಿನಿಧಿಗಳು ಇಲ್ಲಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ನೀವು ಹೇಳಿ. ಅವರು ಕ್ಯಾಬಿನೆಟ್ ಮೀಟಿಂಗನನ್ನು 7 ಗಂಟೆ ಮೇಲೆ ಬೇಕಾದರೆ ಇಟ್ಟುಕೊಳ್ಳಲಿ, ಕ್ಯಾಬಿನೆಟ್ ಮೀಟಿಂಗ್‌ಗೋಸ್ಕರ ಸದನದ ಕಾರ್ಯಕಲಾಪ ಗಳನ್ನು ಮುಂದೂಡುವುದಕ್ಕೆ ಬರುವುದಿಲ್ಲ. ಅವರು 7 ಗಂಟೆಯ ಮೇಲೆ ಸೇರಲಿ.

ಶ್ರೀ ಬಿ.ಎಸ್. ಯಡಯೂರಪ್ಪ : ಆ ರೀತಿ ಕೊಡುವುದಕ್ಕೂ ಬರುವುದಿಲ್ಲ.

MR. SPEAKER : It is a question of accomodation. ಅಷ್ಟೆ. ನನಗೂ ಕೂಡ ರಾತ್ರಿ ಹತ್ತು ಹನ್ನೊಂದು ಗಂಟೆಯವರೆಗೂ ಸದನ ನಡೆಸಿ ಬೆಳಿಗ್ಗೆ ಮತ್ತೆ 9 ಗಂಟೆಗೆ ಇಲ್ಲಿಗೆ ಬಂದಿರುತ್ತೇನೆ. ಆದಕಾರಣ ಈಗ ಸದನವನ್ನು ಮುಂದೂಡಿ ಪುನಃ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳೋಣ.

(ಸದನವು ಸಾಯಂಕಾಲ 5-55 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 11ನೇ ಮಾರ್ಚ 1996ರ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)